ಹಂಪಿ ಟೈಮ್ಸ್

HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY

ಸಂಪುಟ:01	ಸಂಚಿಕೆ:236	ನೋಂದಣಿ ನಂ.:KARKAN27911	ವಿಜಯನಗರ	13.02.2024	ಮಂಗಳವಾರ	ಪುಟ:04	ಬೆಲೆ:2
Volume:01	Issue:236	Reg.No:KARKAN27911	VIJAYANAGARA	13.02.2024	Tuesday	Page:04	Rs:2

ಮೈಕ್ರೋ ನ್ಯೂಸ್

ಫೆ.15ರಂದು ಹೊಸಪೇಟೆ ನಗರಸಭೆ ವಿಶೇಷ ಸಾಮಾನ್ಯ ಸಭೆ

ಹಂಪಿ ಟೈಮ್ಸ್ ಹೊಸಪೇಟೆ

ಹೊಸಪೇಟೆ ನಗರಸಭೆಯ ವಿಶೇಷ ಸಾಮಾನ್ಯ ಸಭೆಯನ್ನು ಫೆ.15ರಂದು ಬೆಳಿಗ್ಗೆ 11 ಗಂಟೆಗೆ ನಗರಸಭೆಯ ಸಭಾಂಗಣದಲ್ಲಿ ಆಯೋಜಿಸಲಾಗಿದೆ. ನಗರಸಭೆ ಅಧ್ಯಕ್ಷರು ಈ ಸಭೆಯ ಅಧ್ಯಕ್ಷತೆ ವಹಿಸುವರು.
ವಿವಿಧ ವಿಷಯಗಳ ಕುರಿತು ಸಭೆಯಲ್ಲಿ ಚರ್ಚಿಸಲಾಗುವುದು ಎಂದು ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತರಕಾರಿ ಬೀಜಗಳ ಮಿನಿಕಿಟ್: ಸದುಪಯೋಗ ಪಡೆದುಕೊಳ್ಳಿ

ಹಂಪಿ ಟೈಮ್ಸ್ ಹೊಸಪೇಟೆ

ತೋಟಗಾರಿಕೆ ಇಲಾಖೆಯಿಂದ 2023–24ನೇ ಸಾಲಿನ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ಪ್ರತಿ ಫಲಾನುಭವಿಗಳಿಗೆ ರೂ. 2000 ಗಳಂತೆ ತರಕಾರಿ ಬೀಜಗಳ ಮಿನಿಕಿಟ್ ವಿತರಣೆಗೆ ಸಿದ್ಧವಾಗಿದೆ.

ಆಸಕ್ತ ರೈತರು ತಮ್ಮ ಎರ್.ಟಿ.ಸಿ, ಜಾತಿ, ಪ್ರಮಾಣ ಪತ್ರ ಮತ್ತು ಆಧಾರ ಕಾರ್ಡ ಪ್ರತಿಗಳನ್ನು ತೋಟಗಾರಿಕೆ ಇಲಾಖೆಯ ಕಚೇರಿಯಲ್ಲಿ ಸಲ್ಲಿಸಿ, ಯೋಜನೆ ಸದುಪಯೋಗ ಪಡೆದುಕೊಳ್ಳುವಂತೆ ತೋಟಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.

ಡಿ.ವಿ.ಜಿ.

ವಿದ್ಯಾರ್ಥಿಗಳ ಹಸಿವು ನೀಗಿಸಲು ಇಂದಿರಾ ಕ್ಯಾಂಟೀನ್ ಆರಂಭಿಸಿ

ಉಪವಾಸದಿಂದ ಕಲಿಕಾಸಕ್ತಿ ದೂರ । ದಿನವಿಡಿ ಹಸಿವಿನಿಂದ ಆರೋಗ್ಯದ ಮೇಲೆ ದುಷ್ಪರಿಣಾಮದ ಆತಂಕ । ಕಾಲೇಜ್ ಬಳಿ ಕ್ಯಾಂಟೀನ್ ತೆರೆಯಲು ವಿದ್ಯಾರ್ಥಿಗಳ ಆಗ್ರಹ

ಹಂಪಿ ಟೈಮ್ಸ್ ಹೊಸಪೇಟೆ

ಪದವಿಪೂರ್ವ ಮತ್ತು ಪದವಿ ಶಿಕ್ಷಣ ಪಡೆಯಲೆಂದು ಬರುವ ಗ್ರಾಮೀಣ ಪ್ರದೇಶದ ಬಡ ವಿದ್ಯಾರ್ಥಿಗಳಿಗಾಗಿ ಜಿಲ್ಲಾ ಕ್ರೀಡಾಂಗಣದಲ್ಲಿ ಇಂದಿರಾ ಕ್ಯಾಂಟೀನ್ ತೆರೆಯಬೇಕೆಂದು ಆಗ್ರಹಿಸಿ ಎಸ್ಎಫ್ಐ ತಾಲೂಕು ಸಮಿತಿ ನೇತೃತ್ವದಲ್ಲಿ ವಿದ್ಯಾರ್ಥಿಗಳು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅವರಿಗೆ ಸೋಮವಾರ ಮನವಿ ಸಲ್ಲಿಸಿದರು.

ಎಸ್ಎಫ್ಐ ರಾಜ್ಯ ಸಮಿತಿ ಸದಸ್ಯ ಶಿವಾರೆಡ್ಡಿ ಮಾತನಾಡಿ, ವಿಜಯನಗರ ಜಿಲ್ಲಾದಾದ್ಯಂತ ಸುತ್ತುಮುತ್ತಲಿನ ಗ್ರಾಮೀಣ ಪ್ರದೇಶಗಳಿಂದನ ಶೇ.85ರಷ್ಟು ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡಲು ಜಿಲ್ಲಾ ಕೇಂದ್ರಕ್ಕೆ ಬರುತ್ತಿದ್ದಾರೆ. ಆದರೆ ಕಾಲೇಜು ಪ್ರಾರಂಭದ ಸಮಯ ಬೆಳಿಗ್ಗೆ 7 ಗಂಟೆಯಿಂದ ಆರಂಭವಾಗುವುದರಿಂದ ಗ್ರಾಮೀಣ ಪ್ರದೇಶದ ಬಹುತೇಕ ವಿದ್ಯಾರ್ಥಿಗಳು ಊಟ ಮಾಡದೆ ಉಪವಾಸ ಬರುತ್ತಿದ್ದಾರೆ. ಇದರಿಂದ ಆರೋಗ್ಯದ ಮೇಲೆ ತೀವ್ರ ಅಡ್ಡ ಪರಿಣಾಮ ಉಂಟುಮಾಡುತ್ತದೆ. ಗ್ಯಾಸ್ಟ್ರಿಕ್, ಡಿ–ಹೈಡ್ರೇಟ್, ವಿದ್ಯಾರ್ಥಿನಿಯರಿಗೆ ರಕ್ತಹೀನತೆ ಮತ್ತು ಅಪೌಷ್ಟಿಕತೆಯಿಂದ ತಲೆ ಚಕ್ರ ಬರುವುದು ಹೆಚ್ಚುತ್ತಿದೆ. ಈ ತರದ ಸಮಸ್ಯೆಗಳಿಂದ ಪಾಠ ಮತ್ತು ಇತರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗಿಯಾಗುವುದು ಕಷ್ಟವಾಗುತ್ತಿದೆ. ಇದರಿಂದ ಅನೇಕ ಬಾರಿ ತರಗತಿ ತಪ್ಪಿಸುತ್ತಾರೆ. ಖಾಸಗಿ ಹೋಟೆಲ್‌ಗಳಲ್ಲಿ ಹೆಚ್ಚು ಬೆಲೆ ನೀಡಿ ಉಪಹಾರ ಸೇವಿಸಲು ಸಾಧ್ಯವಾಗುತ್ತಿಲ್ಲ. ಮಧ್ಯಾಹ್ನ 3ರಿಂದ 4 ಗಂಟೆಯ ವರೆಗೆ ಹಸಿವುನಿಂದ ಇದ್ದು ಮನೆ ತಲುಪುತ್ತಾರೆ. ಜರೂರಾಗಿ ಇಂದಿರಾ ಕ್ಯಾಂಟೀನ್ ತೆರೆದು ಇಂತಹ ಸಮಸ್ಯೆಗಳಿಂದ ವಿದ್ಯಾರ್ಥಿಗಳನ್ನು ಪಾರು ಮಾಡಬೇಕೆಂದು ಭಾರತ ವಿದ್ಯಾರ್ಥಿ ಫೆಡರೇಷನ್ ಮನವಿ ಮಾಡುತ್ತಿದೆ ಎಂದರು.

. ಈ ಸಂದರ್ಭದಲ್ಲಿ ಜಿಲ್ಲಾ ಸಮಿತಿ ಸದ್ಯಸರಾದ ಲೋಕೇಶ್, ನಾರಾಯಣಮೂರ್ತಿ, ಸಿಂಹಾದ್ರಿ, ಕೌಶಿಕ್, ಶಿವುರಾಜಕುಮಾರ್, ತಾಲೂಕು ಮುಖಂಡರಾದ ಪಲ್ಲವಿ, ರೂಪಾ, ಬಾಬು, ಸಂಜುನಾಯಕ್, ಸಿಂಹಾದ್ರಿ, ಲಕ್ಷ್ಮಿ, ಪೂಜಾ, ಮಣಿಕಂಠ, ಯಮನೂರು, ಘಟಕದ ಮುಖಂಡರಾದ ಮನೋಜ್, ಶ್ರೀನಿವಾಸ್, ಪೃಥ್ವಿ ಕುಮಾರ್, ಮಂಜು, ಮತ್ತು ಇತರರು ಇದ್ದರು.

ಕೊಟ್ಟೂರು ಜಾತ್ರಾಮಹೋತ್ಸವ: ಪೂರ್ವಭಾವಿ ಸಭೆ ಫೆ.15ಕ್ಕೆ

ಹಂಪಿ ಟೈಮ್ಸ್ ಹೊಸಪೇಟೆ

ವಿಜಯನಗರ ಜಿಲ್ಲೆ ಕೊಟ್ಟೂರು ತಾಲ್ಲೂಕಿನ ಶ್ರೀ ಗುರುಬಸವೇಶ್ವರಸ್ವಾಮಿ ದೇವಸ್ಥಾನದ ವಾರ್ಷಿಕ ರಥೋತ್ಸವ, ಜಾತ್ರಾ ಮಹೋತ್ಸವ ಪ್ರಯುಕ್ತ ಹಗರಿ ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ಶಾಸಕರು ಹಾಗೂ ವಿಜಯನಗರ ಜಿಲ್ಲಾಧಿಕರಿಗಳ ಉಪಸ್ಥಿತಿಯಲ್ಲಿ ಪೂರ್ವಭಾವಿ ಸಭೆಯನ್ನು

ಫೆ. 15ರಂದು ಬೆಳಿಗ್ಗೆ 11ಗಂಟೆಗೆ ದೇವಸ್ಥಾನದ ಮುಂಭಾಗದಲ್ಲಿ ಆಯೋಜಿಸಲಾಗಿದೆ.
ಕಳೆದ ಸಾಲಿನಲ್ಲಿ ಕೈಗೊಂಡ ಕ್ರಮಗಳ ಮಾಹಿತಿಯೊಂದಿಗೆ ಸಂಬಂಧಪಟ್ಟ ಅಧಿಕಾರಿಗಳು ಖುದ್ದಾಗಿ ಸಭೆಗೆ ಹಾಜರಾಗುವಂತೆ ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿಗಳು ತಿಳಿಸಿದ್ದಾರೆ.

ಫೆ.18 ಐಎಎಸ್, ಕೆ.ಎಎಸ್ ಉಚಿತ ತರಬೇತಿ ಕಾರ್ಯಾಗಾರ

ಹಂಪಿ ಟೈಮ್ಸ್ ಹೊಸಪೇಟೆ

ಜಿಲ್ಲಾಡಳಿತ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಎಸ್.ಎಸ್.ಎಲ್.ಸಿ, ಪಿ.ಯು.ಸಿ. ವಿದ್ಯಾರ್ಥಿಗಳಿಗೆ ಪರೀಕ್ಷಾ ಪೂರ್ವ ತರಬೇತಿ ಮತ್ತು ಪದವೀಧರ ವಸತಿ ನಿಲಯ ವಿದ್ಯಾರ್ಥಿಗಳಿಗೆ ಹಾಗೂ ಆಸಕ್ತ ಇತರೆ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳ ಪೂರ್ವ ತಯಾರಿ ಕುರಿತು ಕಾರ್ಯಗಾರವನ್ನು ಫೆ. 18ರಂದು ನಗರದ ಜಿಲ್ಲಾ ಕ್ರೀಡಾಂಗಣದ ಒಳಾಂಗಣದಲ್ಲಿ ಆಯೋಜಿಸಲಾಗಿದೆ.

ವಿಜಯನಗರ ಜಿಲ್ಲೆಯನ್ನು ಶೈಕ್ಷಣಿಕವಾಗಿ ಜಾಗೃತಗೊಳಿಸಲು ಮತ್ತು ಇಲ್ಲಿನ ವಿದ್ಯಾರ್ಥಿಗಳು ಉನ್ನತ ಮಟ್ಟದ ಸರ್ಕಾರಿ ಮತ್ತು ಇತರೆ ಖಾಸಗಿ ಸಂಸ್ಥೆಗಳಲ್ಲಿ ಉತ್ತಮ ಹುದ್ದೆಯಲ್ಲಿ ಇರುವ ಉದ್ದೇಶ ಇಟ್ಟುಕೊಂಡು ಈ ಕಾರ್ಯಗಾರವನ್ನು ಹಮ್ಮಿಕೊಳ್ಳಲಾಗಿದೆ. ಆರ್ಥಿಕವಾಗಿ ಹಿಂದುಳಿದಿರುವ ವಸತಿ ನಿಲಯದ ವಿದ್ಯಾರ್ಥಿಗಳು ಮತ್ತು ಆಸಕ್ತ ಸ್ಪರ್ಧಾರ್ಥಿಗಳು ಭಾಗವಹಿ ಕಾರ್ಯಾಗಾರದ ಸದುಪಯೋಗ ಪಡೆದುಕೊಳ್ಳಬೇಕು ಎಂದು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು ತಿಳಿಸಿದ್ದಾರೆ.

ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಉದ್ಘಾಟಿಸುವರು. ವಿಷೇಶ ತರಬೇತಿದಾರರಾಗಿ ಶಿಕಾರಿಪುರದ ಸಾಧನ ಅಕಾಡಮಿಯ ಎಜ್ಯುಕೇಟರ್ ಹಾಗೂ ಸಹಾಯಕ ಪ್ರಾಧ್ಯಾಪಕರಾದ ಮಂಜುನಾಥ್ ಬಿ., ರಾಣಿಬೆನ್ನೂರಿನ ಕರ್ನಾಟಕ ಲೀವಿಂಗ್ ಲೈಫ್ ಕೋಚರ್ ಬ್ರಾವೋ ವಿಶ್ವದಾಖಲೆ ಪುರಸ್ಕೃತರಾದ ನಂದೀಶ್.ಬಿ ಶೆಟ್ಟಾರ್ ಅವರು ಐ.ಎ.ಎಸ್., ಕೆ.ಎ.ಎಸ್., ಐ.ಪಿ.ಎಸ್., ಸಿಟಿಐ, ಪಿಡಿಓ, ಎಫ್.ಡಿ.ಎ., ಎಸ್.ಡಿ.ಎ., ಪಿಸಿ, ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸುವ ಕೌಶಲ್ಯ ಕುರಿತು ಮತ್ತು ವ್ಯಕ್ತಿತ್ವ ವಿಕಸನ ಕುರಿತು ಭೋಧನೆ ಮಾಡಲಿದ್ದಾರೆ. ಜಿಪಂ ಸಿಇಒ ಸದಾಶಿವ ಪ್ರಭು ಬಿ., ಎಸ್ಪಿ ಶ್ರೀಹರಿ ಬಾಬು ಬಿ.ಎಲ್., ಸಹಾಯಕ ಆಯುಕ್ತ ನೋಂಗ್ಬಾಯ್ ಮಹ್ಮದ್ ಅಲಿ ಅಕ್ರಮ್ ಷಾ, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಶಾಷುಮೋದಿನ್ ಭಾಗವಹಿಸಲಿದ್ದಾರೆ.

ವಚನ ಅರಿವು

ಚೆನ್ನಯ್ಯನ ಮಗ

ವೇದಕ್ಕೆ ಒರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳವನಿಕ್ಕುವೆ,
ತರ್ಕದ ಬೆನ್ನ ಬಾರನೆತ್ತುವೆ, ಆಗಮದ ಮೂಗ ಕೊಯಿವೆ,
ನೋಡಯ್ಯ
ಮಹಾದಾನಿ ಕೂಡಲಸಂಗಮದೇವಾ,
ಮಾದಾರ ಚೆನ್ನಯ್ಯನ ಮನೆ ಮಗ ನಾನಯ್ಯಾ.
– ಬಸವಣ್ಣ

ವೇದ, ಶಾಸ್ತ್ರ, ಆಗಮ, ತರ್ಕ, ಓದು ಬರಹವನ್ನು ಬಲ್ಲ ಮೇಲ್ವರ್ಗ ತಮ್ಮ ಸ್ವಾರ್ಥಕ್ಕಾಗಿ ಬಳಸುವ ಅಸ್ತ್ರಗಳಂತೆ ಮಾರ್ಪಾಡಾಗಿದ್ದವು. ಶೂದ್ರ ಎಂದು ಕರೆಯುವ, ಶೂದ್ರರಿಗಿಂತಲೂ ಕೆಳಗಿಡಲಾಗಿರುವ ಸಾಮಾನ್ಯ ಜನರ ಪಾಲಿಗೆ ಇವೆಲ್ಲವು ಶೋಷಣೆಯ ಮೂಲವಾಗಿದ್ದವು. ಸಮಾಜದಲ್ಲಿ ಕೃಷಿ, ವಿವಿಧ ಕುಲ ಕಾಯಕಗಳನ್ನು ಮಾಡುತ್ತಿದ್ದ ಜನ ಸಮುದಾಯಗಳನ್ನು ಅಕ್ಷರದಿಂದ ದೂರವೆ ಇಡಲಾಗಿತ್ತು. ಸಾಮಾನ್ಯ ಜನರ ಉಪಯೋಗಕ್ಕೆ ಬಾರದ, ಅವರ ನೋವಿಗೆ ಕಾರಣವಾದ ವೇದವನ್ನು ತಿರಸ್ಕರಿಸಿ ಅದನ್ನು ಒರೆಯ ಕಟ್ಟಿ ಹಾಕುವೆ, ಶಾಸ್ತ್ರವನ್ನು ಬಂದಿಸಿಡುವೆ, ತರ್ಕ ಎಂಬ ಮಾತಿನ ಚಾತುರ್ಯಕ್ಕೆ ಬೆನ್ನು ಮುರಿಯುವೆ, ಜನರ ಬದುಕಿನಲ್ಲಿ ಮೂಗು ತೂರಿಸುವ ಆಗಮದ ಮೂಗ ಕೊಯ್ಯುವೆ ಎಂದು ಬಸವಣ್ಣ ಹೇಳುತ್ತಾನೆ. ಮೇಲ್ವರ್ಗದ ಜನ ದೂರ ಇಡಲಾಗಿದ್ದ ಕೆಳವರ್ಗದ ಮಾದಾರ ಚೆನ್ನಯ್ಯನ ಮಗ ನಾನು ಎಂದು ಹೇಳಿಕೊಂಡು ಸಮಾಜದಲ್ಲಿರುವ ಮೇಲು–ಕೀಳು ಎಂಬ ಜಾತಿ ವ್ಯವಸ್ಥೆಯನ್ನು ಕಿತ್ತೊಗೆಯಲು ಪ್ರಯತ್ನಿಸುತ್ತಾನೆ. ಜೊತೆಗೆ ಲಿಂಗ ಧರಿಸಿ ಲಿಂಗಾಯತರಾದ ಮೇಲೆ ಜಾತಿ ತಾರತಮ್ಯ ಮಾಡಬಾರದು ಎನ್ನುತ್ತಾನೆ.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

ಅಲ್ಪಸಂಖ್ಯಾತರ ಸಮುದಾಯದ ಮುಖಂಡರೊಂದಿಗೆ ಸಿಎಂ ಸಿದ್ದರಾಮಯ್ಯ ಆಯವ್ಯಯ ಪೂರ್ವಭಾವಿ ಸಭೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಲ್ಪಸಂಖ್ಯಾತರ ಸಿಖ್, ಮುಸ್ಲಿಂ, ಕ್ರಿಶ್ಚಿಯನ್, ಬೌದ್ಧ, ಜೈನ್ ಸಮುದಾಯಗಳಿಗೆ ಸೇರಿದ 200 ಮಂದಿ ಪ್ರತಿನಿಧಿಗಳು ಮತ್ತು ಮುಖಂಡರೊಂದಿಗೆ ಸೋಮವಾರ 2024– 25 ನೇ ಸಾಲಿನ ಆಯವ್ಯಯ ಪೂರ್ವಭಾವಿ ಸಭೆ ನಡೆಸಿ ಅಹವಾಲು, ಮನವಿ ಸ್ವೀಕಾರ ಮಾಡಿದರು.

ಸಚಿವರಾದ ಜಮೀರ್ ಅಹ್ಮದ್ ಖಾನ್, ಕೆ.ಜೆ.ಜಾರ್ಜ್, ಬಿಡಿಎ ಅಧ್ಯಕ್ಷ ಎನ್.ಎ. ಹ್ಯಾರಿಸ್, ಸಚಿವ ಕರೀಂ ಖಾನ್, ಡಿ.ಸುಧಾಕರ್, ವಿಧಾನ ಪರಿಷತ್ ಸದಸ್ಯ ಸಲೀಂ ಅಹ್ಮದ್, ಡಿ.ಸುಧಾಕರ್, ಕೆಪಿಸಿಸಿ ಕಾರ್ಯದರ್ಶಿ ಮೆಟಿಲ್ಡಾ ಸೇರಿ ಹಲವು ಮುಖಂಡರು ಉಪಸ್ಥಿತರಿದ್ದರು.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು: **ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 9448633038

ತಿಪಟೂರು ಕ್ರೀಡಾ ಕಣ್ಮಣಿ ಶರತ್

ತುಮಕೂರು ಕರ್ನಾಟಕದಲ್ಲಿ ಅತೀ ಹೆಚ್ಚು ತೆಂಗು,ರಾಗಿ ಬೆಳೆಯುವ ಜಿಲ್ಲೆ ಇದು 'ಕಲ್ಪತರು ನಾಡು'ಎಂದು ಹೆಸರುವಾಸಿಯಾಗಿದ್ದು ಪುಣ್ಯಕ್ಷೇತ್ರವಾದ ಶ್ರೀ ಸಿದ್ದಗಂಗಾ ಮಠ ವಿಶ್ವವಿಖ್ಯಾತವಾಗಿದೆ.

ತಿಪಟೂರು ತುಮಕೂರು ಜಿಲ್ಲೆಯ ಪ್ರಮುಖ ತಾಲ್ಲೂಕು ಕೇಂದ್ರ ಇದು ಏಷ್ಯಾದಲ್ಲಿಯೇ ಅತಿ ದೊಡ್ಡ ಕೊಬ್ಬರಿ ಮಾರುಕಟ್ಟೆಯನ್ನು ಹೊಂದಿದೆ. ಇಂತಹ ಪ್ರಸಿದ್ಧಿಯನ್ನು ಹೊಂದಿರುವ ನಗರವು ಇದೀಗ ಕ್ರೀಡಾ ಕ್ಷೇತ್ರದಲ್ಲೂ ತನ್ನ ಛಾಪನ್ನು ಮೂಡಿಸಿದೆ.

ಹಲವಾರು ರಾಷ್ಟ್ರಮಟ್ಟದ ಕ್ರೀಡಾ ಕೂಟಗಳ ಆಯೋಜನೆ ಸಾಕಷ್ಟು ಹೆಸರು ತಂದುಕೊಟ್ಟಿದೆ ಇದಲ್ಲದೆ, ಮಾಕನಹಳ್ಳಿ ಶಂಕರಪ್ಪ ಶರತ್ ರವರು ಪ್ಯಾರ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ವಿಶ್ವವೇ ಬೆರಗಾಗಿಸುವಂತಹ ಸಾಮರ್ಥ್ಯವನ್ನು ಪ್ರದರ್ಶಿಸಿ ಪದಕಗಳನ್ನು ಗೆದ್ದು ಕರ್ನಾಟಕದತ್ತ ನೋಡುವಂತೆ ಮಾಡಿದ್ದಾರೆ.

ತಂದೆ–ಶಂಕರಪ್ಪ,ತಾಯಿ–ಭಾಗ್ಯಮ್ಮ ಇವರ ಎರಡು ಮಕ್ಕಳಲ್ಲಿ ಶರತ್ ಹಿರಿಯ ಮಗ ಶೇಕಡ 90 ರಷ್ಟು ಅಂದತ್ವ ಹೊಂದಿರುವ ಇವರು ತಮ್ಮ ಸ್ವಗ್ರಾಮದಲ್ಲಿ ಒಂದರಿಂದ–ನಾಲ್ಕನೇ ತರಗತಿವರೆಗೆ ಪ್ರಾಥಮಿಕ ಶಿಕ್ಷಣವನ್ನು ಪಡೆಯುತ್ತಾರೆ ಶಿಕ್ಷಕಿ 'ಸುಜಾತಾ'ರವರು ಆಶಾಕಿರಣ ಅಂದರ ಶಾಲೆ,ಚಿಕ್ಕಮಗಳೂರು ಇದರ ಮಾಹಿತಿಯನ್ನು ತಿಳಿಸಿ ಮುಂದಿನ ವಿದ್ಯಾಭ್ಯಾಸಕ್ಕಾಗಿ ತೆರಳಲು ಸೂಚಿಸುತ್ತಾರೆ.

ಪುನಃ ಒಂದನೇ ತರಗತಿಯಿಂದ ಆರಂಭಿಸಿ ಹತ್ತನೇ ತರಗತಿವರೆಗೆ ಬ್ರೈಲ್ಲಿಪಿಯಲ್ಲಿ ತಮ್ಮ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಪೂರೈಸುತ್ತಾರೆ.

ತನ್ನ ಅಂದತ್ವದಿಂದ ಈ ಜಗತ್ತೇ ಶೂನ್ಯವೆನಿಸಿದ ಮನೋಭಾವದಲ್ಲಿದ್ದ ಶರತ್ ಅಂದರ ಶಾಲೆಗೆ ಸೇರಿದ ನಂತರ ನನಗೂ ಒಂದು ಜಗತ್ತಿದೆ,ನಾನು ಬದುಕಬಹುದು, ನನಗಿಂತ ಹೆಚ್ಚಿನ ತೊಂದರೆಯಲ್ಲಿರುವವರು ಬದುಕುತ್ತಿದ್ದಾರೆ, ನಾವೆಂದಿಗೂ ನಮಗಿಂತ ಹೆಚ್ಚಿನ ತೊಂದರೆಯಲ್ಲಿರುವ ವರನ್ನು ನೋಡಬೇಕೆ ವಿನಃ ನಾನೇ ದೊಡ್ಡ ತೊಂದರೆ ಅನುಭವಿಸುತ್ತಿದ್ದೇನೆ ಎಂಬುದಾಗಿ ಭಾವಿಸಬಾರದು ನಾನೇ ಅದೃಷ್ಟವಂತ ಎಂದುಕೊಂಡು ಸಂತೋಷದಿಂದ ಇರಲು ಕಲಿತರು.

ಆಶಾಕಿರಣ ಅಂದರ ಶಾಲೆ ಸಾಕಷ್ಟು ವಿಕಲಚೇತನ ಕ್ರೀಡಾಪಟುಗಳಿಗೆ ಜನ್ಮಭೂಮಿ ಎಂದೇಳಿದರೆ ತಪ್ಪಾಗಲಾರದು ದಿವಂಗತ ಗೋಪಾಲ್ ದೈಹಿಕ ಶಿಕ್ಷಣ ಶಿಕ್ಷಕರು ಇವರೆಲ್ಲರಿಗೂ ಕ್ರೀಡಾಕೌಶಲ್ಯಗಳನ್ನು ಕಲಿಸಿಕೊಡುವ ಮೂಲಕ ದಾರಿದೀಪವಾದರು.

ಇಲ್ಲಿನ ಹಿರಿಯ ಆಟಗಾರರ ಸಹಕಾರದೊಂದಿಗೆ ಕ್ರೀಡೆಯಲ್ಲಿ ಪಾಲ್ಗೊಳ್ಳಲು ಪ್ರಾರಂಭಿಸಿ,ಈಗಾಗಲೇ ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಸರುಗಳಿಸಿದ ಶವದ್ ಇವರ ಜೊತೆಗೂಡಿ ಓಡಲು ಶರತ್ ಆರಂಭಿಸುತ್ತಾರೆ. ಇವರು ಪದವಿಪೂರ್ವ ಶಿಕ್ಷಣವನ್ನು ಸ್ನೇಹಿತ ಶ್ರೀಧರ್ ಸಹಕಾರದೊಂದಿಗೆ ಉದಯ ಭಾರತಿ ಕಾಲೇಜ್ ತಿಪಟೂರಿನಲ್ಲಿ ಪೂರ್ಣಗೊಳಿಸುತ್ತಾರೆ.

ಬೆಂಗಳೂರಿನ ಕೆ,ಆರ್.ಪುರಂ ನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಪದವಿ ಪಡೆಯಲು ಸೇರಿಕೊಳ್ಳುತ್ತಾರೆ.

ಈ ಮಧ್ಯೆ ಶವದ್ ಜೊತೆ ಪ್ರಾಕ್ಟೀಸ್ ಮಾಡಿ ಅವರ ರೂಮಿನಲ್ಲೆ ತಂಗುತ್ತಿದ್ದ ಇವರನ್ನು ಗಮನಿಸಿದ ಸತ್ಯನಾರಾಯಣ್ ಮತ್ತು ರಾಹುಲ್ ಅಂತರಾಷ್ಟ್ರೀಯ ಪ್ಯಾರ ಅಥ್ಲೆಟಿಕ್ ತರಬೇತುದಾರರು ಇವರಿಗೆ ಬೆಂಗಳೂರಿನ ಸಾಯ್ ಸೆಂಟರ್ ನಲ್ಲಿ ತರಬೇತಿ ಕೊಡಲು ಆರಂಭಿಸುತ್ತಾರೆ.

ತನ್ನ ಹುಟ್ಟೂರಿನ ಕೆಲ ಸಣ್ಣ ಮನಸ್ಥಿತಿ ಉಳ್ಳ ಜನ ಇವ ಕಣ್ಣು ಕಾಣದವ, ಉಪಯೋಗಕ್ಕೆ ಬಾರದವ ಎಂಬುದಾಗಿ ಹೇಳಿದರೂ ಸಹ ಇವರ ಮಾತುಗಳಿಗೆ ಧೃತಿಗೆಡದೆ ಅಂತರಾಳದಲ್ಲಿದ್ದ ಏನನ್ನಾದರೂ ಸಾಧಿಸುತ್ತೇನೆ ಎಂಬ ಕಿಚ್ಚು ತಾನು ತರಬೇತಿ ಪಡೆಯುವಾಗ ಪದೇ ಪದೇ ನೆನಪಾಗುತ್ತಿತ್ತು ಚಿಕ್ಕವರಿದ್ದಾಗ ತಂದೆ ತಾಯಿ ನೀನು ಏನನ್ನಾದರೂ ಸಾಧಿಸಬಲ್ಲೆ ನಿನ್ನಿಷ್ಟದಂತೆ ನೀನು ಬದುಕು ಯಾವುದನ್ನು ಮನಸ್ಸಿಗೆ ಹಚ್ಚಿಕೊಳ್ಳದೆ ಬದುಕುವುದನ್ನು ಕಲಿ ಮಗನೆ ಎಂದೆಳುತಿದ್ದ ಮಾತು,ಸಾಕಷ್ಟು ಮಾನಸಿಕ ಯಾತನೆಯ ಅನುಭವ ಸಾಧಿಸಬೇಕೆಂಬ ಮನೋಸ್ಥೈರ್ಯ ಸಾಧನೆಗೆ ಪ್ರೇರೇಪಿಸಿತು.

ನನಗೆ ನಾನೇ ರೋಲ್ ಮಾಡಲ್ ಎಂದುಕೊಂಡು ಕಠಿಣ ತರಬೇತು ಪಡೆದು ಪದಕ ಬೇಟೆಯನ್ನು ಆರಂಭಿಸುತ್ತಾರೆ ಶರತ್.

ಕ್ರೀಡಾ ಸಾಧನೆಗಳು ಪ್ರಥಮ ಬಾರಿಗೆ ಪದಕವನ್ನು ಪಡೆದಾಗ ಅತೀವ ಸಂತೋಷಪಟ್ಟು ಇನ್ನೂ ಹೆಚ್ಚಿನ ಸಾಧನೆ ಮಾಡುವ ಆಸಕ್ತಿ ಹೊಂದಿದ ಇವರು 2016 ದೆಹಲಿಯಲ್ಲಿ ನಡೆದ ಇಂಡಿಯನ್ ಬ್ಲೈಂಡ್ ಸ್ಪೋರ್ಟ್ಸ್ ಅಸೋಸಿಯೇಷನ್ ನಡೆಸಿದ ರಾಷ್ಟ್ರೀಯ ಕ್ರೀಡಾಕೂಟದಲ್ಲಿ 400 ಮತ್ತು 1500 ಮೀಟರ್ ಓಟದಲ್ಲಿ ಬೆಳ್ಳಿ ಪದಕ ಜಯಿಸಿರುತ್ತಾರೆ.

ಹರಿಯಾಣ 2018 ರಾಷ್ಟ್ರೀಯ ಪ್ಯಾರಾ ಅಥ್ಲೆಟಿಕ್ ಚಾಂಪಿಯನ್ಶಿಪ್ ನಲ್ಲಿ ಭಾಗವಹಿಸಿ 800 ಮೀಟರ್ ಓಟದಲ್ಲಿ ಚಿನ್ನ 1500 ಮೀಟರ್ ಓಟದಲ್ಲಿ ಬೆಳ್ಳಿ ಪದಕವನ್ನು ಪಡೆದು ಅಂತರಾಷ್ಟ್ರೀಯ ಕ್ರೀಡಾಕೂಟಕ್ಕೆ ಆಯ್ಕೆಯಾಗುತ್ತಾರೆ.

2018 ಜರ್ಮನಿಯ ಬರ್ಲಿನ್ ನಲ್ಲಿ ನಡೆದ ವಿಶ್ವಮಟ್ಟದ ಕ್ರೀಡಾಕೂಟದಲ್ಲಿ 1500 ಮೀಟರ್ ಓಟದಲ್ಲಿ ಬೆಳ್ಳಿಯ ಪದಕ ಪಡೆದಿರುತ್ತಾರೆ.

2019 ಸ್ವಿಜರ್ಲ್ಯಾಂಡ್ ನಲ್ಲಿ ನಡೆದ ಜೂನಿಯರ್ ವರ್ಲ್ಡ್ ಪ್ಯಾರಾ ಅಥ್ಲೆಟಿಕ್ ಚಾಂಪಿಯನ್ಶಿಪ್ ನಲ್ಲಿ 1500 ಮೀಟರ್ ಓಟದಲ್ಲಿ ಚಿನ್ನದ ಪದಕ ಪಡೆದಿರುತ್ತಾರೆ.

ಡಾ.ಸುಧಾಕರ ಜ.ಲಕ್ಕವಳ್ಳಿ
ಕ್ರೀಡಾ ಲೇಖಕರು, 8747969381

2023 ದುಬೈನಲ್ಲಿ ನಡೆದ ವರ್ಲ್ಡ್ ಪ್ಯಾರಾ ಗ್ರ್ಯಾಂಡ್ ಫಿಕ್ಸ್ ನಲ್ಲಿ ಭಾಗವಹಿಸಿ 1500 ಮತ್ತು 5000 ಮೀಟರ್ ಓಟದಲ್ಲಿ ಬೆಳ್ಳಿ ಪದಕ ಪಡೆದಿರುತ್ತಾರೆ.

ಅದೇ ವರ್ಷ ಚೈನಾದಲ್ಲಿ ನಡೆದ ನಾಲ್ಕನೇ ಏಷ್ಯನ್ ಪ್ಯಾರಾ ಗೇಮ್ಸ್ ನಲ್ಲಿ ಭಾಗವಹಿಸಿ 1500 ಮೀಟರ್ ಓಟದಲ್ಲಿ ಬೆಳ್ಳಿ ಪದಕ ಪಡೆಯುವುದರೊಂದಿಗೆ ದೇಶದ ಕೀರ್ತಿಯನ್ನು ಹೆಚ್ಚಿಸಿರುತ್ತಾರೆ.

ಇವರ ಈ ಸಾಧನೆಗಳನ್ನು ಪರಿಗಣಿಸಿ ಸ್ಥಳೀಯ ಸಂಘ ಸಂಸ್ಥೆಗಳು ಸನ್ಮಾನಿಸಿ ಗೌರವಿಸಿವೆ ತುಮಕೂರು ಜಿಲ್ಲಾಡಳಿತ 'ರಾಜ್ಯೋತ್ಸವ ಪ್ರಶಸ್ತಿ',ತಿಪಟೂರಿನ ಸ್ಥಳಿಯ ಕ್ರೀಡಾಭಿಮಾನಿಗಳು 'ಕ್ರೀಡಾ ರತ್ನ ಪ್ರಶಸ್ತಿ' ನೀಡಿ ಗೌರವಿಸಿವೆ.

ಇಷ್ಟೆಲ್ಲಾ ಸಾಧನೆ ಮಾಡಿದ ತರುವಾಯ ಹಿಯಾಳಿಸಿದ ಜನ ಕರೆದು ಪ್ರೀತಿಯಿಂದ ಮಾತನಾಡಿಸುತ್ತಾರೆ. ಅಂತರಾಷ್ಟ್ರೀಯ ಪದಕ ಗೆದ್ದು ಬಂದ ಸಂದರ್ಭದಲ್ಲಿ ಊರಿನಲ್ಲೆಡೆ ಮೆರವಣಿಗೆ ಮಾಡುತ್ತಾರೆ ಇದರಿಂದ ನನಗೆ ಸಂತೋಷವಾಗುತ್ತದೆ ಆದರೆ ಇದಕ್ಕಿಂತ ಹೆಚ್ಚಿನದಾಗಿ ಇಡೀ ದೇಶವೇ ಕೊಂಡಾಡುವಂತಹ ವಾತಾವರಣ ಸೃಷ್ಟಿಸಬೇಕು ಅದು ಒಲಂಪಿಕ್ಸ್ ನಲ್ಲಿ ಮೆಡಲ್ ಮಾಡಿದಾಗ ಮಾತ್ರ ಸಾಧ್ಯವಾಗುತ್ತದೆ ಎಂದು ತಮ್ಮ ಆಸೆಯನ್ನು ವ್ಯಕ್ತಪಡಿಸುತ್ತಾರೆ.

ಯುವಕರೇ ಸುಮ್ಮನಿದ್ದರೆ ಯಾವುದು ನಿಮ್ಮ ಕಾಲಬುಡದಲ್ಲಿ ಬಂದು ಬೀಳುವುದಿಲ್ಲ,ಅದಕ್ಕಾಗಿ ಸಾಕಷ್ಟು ಕಷ್ಟ ಪಡಬೇಕು. ನಿಮಗೆ ಆಸಕ್ತಿ ಇರುವ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳಿ,ಯಾರೋ ಹೇಳಿದರೆಂದು ನಿಮ್ಮ ಆಸಕ್ತಿಯನ್ನು ಬದಲಿಸಿ ಇಷ್ಟವಿಲ್ಲದ ಕ್ಷೇತ್ರದಲ್ಲಿ ಕಷ್ಟ ಪಡಬೇಡಿ ಶ್ರಮವಹಿಸಿದರೆ ಎಲ್ಲವೂ ಸಾಧ್ಯ ಎಂದು ಕಿವಿಮಾತು

ಹೇಳುತ್ತಾರೆ ಶರತ್.

ನನಗೆ ಇನ್ನು ಓದಬೇಕೆಂಬ ಆಸೆ ಆದರೆ ವಯಸ್ಸು ಮೀರಿದ ಮೇಲೆ ಸರ್ಕಾರಿ ನೌಕರಿಯನ್ನು ಪಡೆಯಲು ಸಾಧ್ಯವಿಲ್ಲ ಆ ಕಾರಣದಿಂದಾಗಿ ನೌಕರಿ ಪಡೆಯುವಲ್ಲಿ ಪ್ರಯತ್ನಿಸುತ್ತಿದ್ದೇನೆ ಮುಂದೆ ದೂರ ಶಿಕ್ಷಣದ ಮೂಲಕ ಓದುತ್ತೇನೆ ಎಂದು ತಿಳಿಸುತ್ತಾ ಸರ್ಕಾರವು ನಮ್ಮಂತ ಸಾಧಕರನ್ನು ಗುರುತಿಸಿ ಸಹಕಾರಕ್ಕೆ ನಿಲ್ಲಬೇಕು ಜೊತೆಜೊತೆಗೆ ಜಿಲ್ಲಾ ಹಂತದಲ್ಲಿ ತರಬೇತಿ ಕೇಂದ್ರಗಳನ್ನು ತೆಗೆದು ದಿವ್ಯಾಂಗರ ಕ್ರೀಡಾಕೂಟಗಳನ್ನು ನಡೆಸಿ ಆಯ್ಕೆಮಾಡಿ ವಿದೇಶದಲ್ಲಿ ನೀಡುವಂತಹ ವೈಜ್ಞಾನಿಕ ತರಬೇತಿ,ಆಹಾರ ಕ್ರಮ, ಹೆಚ್ಚಿನ ಅನುದಾನ ಮತ್ತು ಸುಸಜ್ಜಿತ ತರಬೇತಿ ಕ್ರೀಡಾ ನಿಲಯಗಳನ್ನು ತಾಲೂಕು ಕೇಂದ್ರಗಳಲ್ಲಿ ತೆರೆಯುವ ಮೂಲಕ ಇನ್ನು ಹೆಚ್ಚಿನ ಸಾಧನೆಯನ್ನು ಪ್ಯಾರಸಾಧಕರಿಂದ ನಿರೀಕ್ಷಿಸಬಹುದೆಂದೇಳುತ್ತಾರೆ.

ಸುಜಾತ ಮೇಡಂ,ಆಶಾಕಿರಣ ಶಾಲೆ, ಶವದ್ ,ಶ್ರೀಧರ್, ಸತ್ಯನಾರಾಯಣ್ ಮತ್ತು ರಾಹುಲ್ ಸರ್ ಋಣವನ್ನು ಈ ಜನುಮದಲ್ಲಿ ತೀರಿಸಲು ಸಾಧ್ಯವಿಲ್ಲ ಅಂಗನ್ಯೂನತೆ ಹೊಂದಿರುವ ಮಕ್ಕಳನ್ನು ಪಡೆದ ಪೋಷಕರು ಧೃತಿಗೆಡುವ ಅವಶ್ಯಕತೆ ಇಲ್ಲ.

ಸಾಕಷ್ಟು ಅವಕಾಶಗಳಿದ್ದು ಸರಿಯಾಗಿ ಬಳಸಿಕೊಳ್ಳಿ,ನಾನು ಕೂಡ ಬಳಸಿಕೊಂಡು ಬೆಳೆದಿದ್ದೇನೆ ದೇಶಕ್ಕೆ ಕೀರ್ತಿ ತಂದಿದ್ದೇನೆ ನೀವು ಕೂಡ ಅದೇ ದಾರಿಯಲ್ಲಿ ಸಾಗಬಹುದು ತಮಗಿಷ್ಟ ಇರುವ ಕ್ಷೇತ್ರದಲ್ಲಿ ಧುಮುಕಿ ಸಾಧನೆಗೆ ಮುಂದಾಗಿ,ಪ್ರಯತ್ನ ಪಡಿ ಪೋಷಕರು ಮಕ್ಕಳು ಏನು ಮಾಡುತ್ತಿದ್ದಾರೆ ಎಂಬುದನ್ನು ಗಮನಿಸಿ ಅವರಿಗೆ ಆಸಕ್ತಿದಾಯಕರಾಗಿ,ಸಮಾಜ ಅಂತಹವರನ್ನು ಹೀಯಾಳಿಸುತ್ತಾ ಕೂರದೇ ಮುಖ್ಯ ವಾಹಿನಿಗೆ ತರುವುದರಲ್ಲಿ ಎಡವದಿರಿ ಎಂದು ವಿನಂತಿಸಿಕೊಳ್ಳುತ್ತಾರೆ ಶರತ್.

ಸಮಾಜದಲ್ಲಿ ನಮ್ಮ ಜವಾಬ್ದಾರಿ ಹೆಚ್ಚಿದೆ,ಇಂತಹ ಸಾಧಕರನ್ನು ಪ್ರೋತ್ಸಾಹಿಸುವ ಹೊಣೆ ನಮ್ಮದು. ಸಾಮರ್ಥ್ಯ ಹೊಂದಿರುವ ವಿಶೇಷ ಚೇತನ ಮಕ್ಕಳು ತಮ್ಮ ಗಮನಕ್ಕೆ ಬಂದಾಗ ಅಂಥವರನ್ನು ಪೋಷಿಸುವ, ಮುಖ್ಯವಾಹಿನಿಗೆ ತಂದು ಅವರಿಂದ ದೇಶಕ್ಕೆ ಕೀರ್ತಿ ಹೆಚ್ಚಿಸುವ ಕಾರ್ಯ ಸರ್ವರಿಂದಾ ಗಲಿ ಎಂದು ಆಶಿಸುತ್ತಾ ಆಲ್ ದಿ ಬೆಸ್ಟ್ ಶರತ್ ಎಂದೇಳೋಣ..

ಕಾಂಗ್ರೆಸ್ ಸರ್ಕಾರದ ಬಣ್ಣ ಬಯಲಾಗಿದೆ

ಜಿಲ್ಲಾಧ್ಯಕ್ಷ ಚನ್ನಬಸವನಗೌಡ ಪಾಟೀಲ್ ಹೇಳಿಕೆ। ಜಿಲ್ಲಾ ಕಾರ್ಯಕಾರಿಣಿ ಸಭೆ। ಸರ್ಕಾರದಿಂದ ಅಭಿವೃದ್ಧಿಗೆ ಅನುದಾನ ಬಂದಿಲ್ಲ

■ **ಹಂಪಿ ಟೈಮ್ಸ್ ಹೊಸಪೇಟೆ**

ಕಾಂಗ್ರೆಸ್ ಅಧಿಕಾರಕ್ಕೆ ಬಂದು ಮೂರು ತಿಂಗಳಲ್ಲೇ ಸರ್ಕಾರದ ಅಸಲಿ ಬಣ್ಣ ಬಯಲಾಗಿದೆ. ಸುಳ್ಳು ಗ್ಯಾರಂಟಿಗಳನ್ನು ಜನರಿಗೆ ನೀಡಿ ರಾಜ್ಯವನ್ನು ಬಡತನದತ್ತ ತಳ್ಳುತ್ತಿದೆ ಎಂದು ಜಿಲ್ಲಾಧ್ಯಕ್ಷ ಚನ್ನಬಸವನಗೌಡ ಪಾಟೀಲ್ ರಾಜ್ಯ

ಕವಿ ಮನಸು

ಜೀವನ ಚಕ್ರ



ಏನು ತಾತ ನಿಮ್ಮ ಪಯಣ ಎತ್ತ
ನೆತ್ತಿಯ ಮೇಲೆ ಸೂರ್ಯನ ಚಿತ್ತ
ನಿನ್ನಯ ನೆತ್ತಿಯು ಸುಡುತಿಹುದಲ್ಲ
ಆಸರೆ ನಿನಗೆ ಯಾರೂ ಇಲ್ಲ

ಕಣ್ಣಾಗಿದೆ ಮಸುಗು ಮಸುಗು
ವಯಸ ಮಾಡಿದೆ ಕಣ್ಣಿಗೆ ನಸುಗು
ಕಸುವಿರುವಾಗ ಎಲ್ಲವೂ ಹತ್ತಿರ
ಕಸು ಕಳೆದಾಗ ಎಲ್ಲರೂ ದೂರ

ಹುಟ್ಟು ಸಾವು ಜೀವನ ಚಕ್ರ
ಎರಡರ ಮದ್ಯೆ ಬದುಕಿನ ಚಕ್ರ
ಆದಿಯಲೆಲ್ಲರೂ ಮುದ್ದುಗೈವರು
ಅಂತ್ಯ ಕಾಲದಿ ದೂರ ಸರಿವರು

ಹಣ್ಣೆಲೆ ಕಂಡ ಚಿಗುರಲೆ ನಗುವುದು
ಮುಂದಿನ ಹಣ್ಣೆಲೆ ತಾನೆಂದು ತಿಳಿಯದು
ಇತಿಹಾಸವೇ ಮರುಕಳಿಸಲಿರುವಾಗ
ಮನುಜನೇ ನೀನ್ಯಾವ ಲೆಕ್ಕ ಹೇಳೀಗ

ಮುದುಕರು ಬಲು ಕಿರಿ ಕಿರಿ ಎನ್ನದಿರಿ
ನಿಮಗೇನೂ ತಿಳಿಯುದಿಲ್ಲೆಂದು ಹೇಳದಿರಿ
ಅವರಿಗಿಂತ ನೀವ್ ದೊಡ್ಡವರೇನ್ರಿ
ಅನುಭವಕಿಂತ ದೊಡ್ಡದು ಎಲ್ಲಿದೆ ಹೇಳ್ರಿ

– ಕೆ ಎಂ ಬಸವರಾಜ
ನಿವೃತ್ತ ಇಂಜನಿಯರ್ ಹೊಸಪೇಟೆ

ಮಕ್ಕಳು ಅರಸರಾಗಬೇಕೆ?

ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?

ತುಂಗಭದ್ರಾ ನೀರಿನ ಮಟ್ಟ



ಸೋಮವಾರ: 12–02–2024

ಗರಿಷ್ಠ ಮಟ್ಟ	1633 ಅಡಿ
ಇಂದಿನ ಮಟ್ಟ	1587.98 ಅಡಿ
ಒಳ ಹರಿವು	00 ಕ್ಯುಸೆಕ್
ಹೊರ ಹರಿವು	76 ಕ್ಯುಸೆಕ್
ಇಂದಿನ ಸಾಮರ್ಥ್ಯ	9.423 ಟಿಎಂಸಿ
ಗರಿಷ್ಠ ಸಾಮರ್ಥ್ಯ	105.788 ಟಿಎಂಸಿ

ಕಳೆದ ವರ್ಷ ಇದೇ ದಿನ

ಗರಿಷ್ಠ ಮಟ್ಟ	1633 ಅಡಿ
ಇಂದಿನ ಮಟ್ಟ	1612.27 ಅಡಿ
ಒಳ ಹರಿವು	00 ಕ್ಯುಸೆಕ್
ಹೊರ ಹರಿವು	7421 ಕ್ಯುಸೆಕ್
ಸಾಮರ್ಥ್ಯ	42.247 ಟಿಎಂಸಿ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

ಗಣಿತ ಲೋಕದ ಮೇಧಾವಿ..

ಶ್ರೀನಿವಾಸ್ ರಾಮಾನುಜಮ್

ತಮಿಳುನಾಡಿನ ಪುಟ್ಟ ಹಳ್ಳಿಯ ಶಾಲೆಯೊಂದರ ಗಣಿತ ಪಂಡಿತರು ಒಂದು ಸಂಖ್ಯೆಯನ್ನು ಅದೇ ಸಂಖ್ಯೆಯಿಂದ ಭಾಗಿಸಿದಾಗ ಉತ್ತರ 1 ಬರುತ್ತದೆ ಎಂದು ಕೆಲವು ಉದಾಹರಣೆಗಳ ಮೂಲಕ ವಿವರಿಸಿದರು. ಆಗ ಪುಟ್ಟ ಬಾಲಕನೋರ್ವ ಎದ್ದು ನಿಂತು ಹಾಗಾದರೆ ಸೊನ್ನೆಯನ್ನು ಸೊನ್ನೆಯಿಂದ ವಿಭಾಗಿಸಿದಾಗ ಒಂದು ಬರುತ್ತದೆಯೇ ಎಂದು ಪ್ರಶ್ನಿಸಿದನು. ಆಗ ಶಿಕ್ಷಕರು "ಮೂರ್ಖ ಬಾಲಕನೆ, ಸೊನ್ನೆಗೆ ಯಾವುದೇ ಮೌಲ್ಯವಿಲ್ಲ ಎಂಬುದು ಅರಿವಿಲ್ಲವೇ ಎಂದು ವ್ಯಂಗ್ಯವಾಗಿ ಕೇಳಿದಾಗ ಆ ಬಾಲಕನು ಸೊನ್ನೆಗೆ ಮೌಲ್ಯವಿಲ್ಲವೇಕೆ?? ಒಂದರ ಮುಂದೆ 0 ಇಟ್ಟರೆ 10 ಆಗುತ್ತದೆ, ಹತ್ತರ ಮುಂದೆ ಮತ್ತೊಂದು ಸೊನ್ನೆ ಇಟ್ಟರೆ 100 ಆಗುತ್ತದೆ, ಹೀಗೆ ಒಂದೊಂದೇ ಸೊನ್ನೆಯನ್ನು ಇರಿಸುತ್ತಾ ಹೋದರೆ ಆ ಸಂಖ್ಯೆಯ ಮೌಲ್ಯ ಹೆಚ್ಚಾಗುತ್ತದೆ ಎಂದು ಹೇಳಿದಾಗ ಆ ಪುಟ್ಟ 8 ವರ್ಷದ ಬಾಲಕನ ಮಾತಿಗೆ ಬಾಯಿಯ ಮೇಲೆ ಬೆರಳಿಟ್ಟರು ಆ ಪಂಡಿತರು. ಹೀಗೆ ಪಂಡಿತರಿಗೆ ತನ್ನ ಅಭೂತಪೂರ್ವ ಗಣಿತದ ಜ್ಞಾನದಿಂದ ಅಚ್ಚರಿಪಡಿಸಿದ ಆ ಬಾಲಕನೇ ಖ್ಯಾತ ಗಣಿತಜ್ಞ ಶ್ರೀನಿವಾಸ್ ರಾಮಾನುಜಮ್.

22 ಡಿಸೆಂಬರ್ 1887 ರಲ್ಲಿ ತಮಿಳುನಾಡಿನ ಕುಂಭಕೋಣಂನಲ್ಲಿ ಜನಿಸಿದ ರಾಮಾನುಜಂ ಅವರ ತಂದೆ ಶ್ರೀನಿವಾಸ ಕುಪ್ಪುಸ್ವಾಮಿ ಅಯ್ಯಂಗಾರ್ ಮತ್ತು ತಾಯಿ ಕೋಮಲತಮ್ಮಾಳ. ಅತ್ಯಂತ ಬಡತನದ ಮನೆ ಪರಿಸ್ಥಿತಿ. ತಂದೆ ಬೇರೆಯವರ ಅಂಗಡಿಯಲ್ಲಿ ಲೆಕ್ಕ ಪತ್ರ ಬರೆದು ಸಂಪಾದಿಸಿದರೆ, ತಾಯಿ ದೇವಸ್ಥಾನಗಳಲ್ಲಿ ಹಾಡಿ, ಮನೆಯಲ್ಲಿ ಸಂಗೀತ ಪಾಠ ಹೇಳಿಕೊಟ್ಟು ಅದರಿಂದ ಬಂದ ದುಡ್ಡಿನಲ್ಲಿ ಮನೆ ನಡೆಸುತ್ತಿದ್ದಳು. ಚಿಕ್ಕಂದಿನಿಂದಲೂ ಅಂಕಗಳ ಜೊತೆ ಆಟವಾಡುತ್ತಾ ಬೆಳೆದ ಬಾಲಕನಿಗೆ ಲೆಕ್ಕ ಹಾಕುವುದೆಂದರೆ ಬಲು ಇಷ್ಟದ ಕೆಲಸ. ಗಣಿತದ ಜೀನಿಯಸ್ ಎಂದೇ ಕರೆಯಲ್ಪಟ್ಟ ರಾಮಾನುಜಮ್ ತನಗಿಂತ ದೊಡ್ಡ ಹುಡುಗರಿಗೆ ಗಣಿತದ ಪಾಠಗಳನ್ನು ಹೇಳಿಕೊಟ್ಟು ಹಣ ಸಂಪಾದಿಸಿ ಮನೆಯ ಖರ್ಚಿಗೆ ನೀಡುತ್ತಿದ್ದ. ಯಾವುದೇ ಆಟೋಟಗಳಲ್ಲಿ ಪಾಲ್ಗೊಳ್ಳದೆ,ಕೇವಲ ಅಂಕಗಳೊಂದಿಗೆ ಆಟವಾಡುತ್ತಾ ಬೆಳೆದ ಬಾಲಕ ಶಾಲೆಯ ವೇಳಾಪಟ್ಟಿಯನ್ನು ತಯಾರಿಸಿ ಕೊಡುವುದರಲ್ಲಿ ನಿಸ್ಸೀಮನಾಗಿದ್ದ. ಹತ್ತನೇ ತರಗತಿಯನ್ನು ಪಾಸಾದ ನಂತರ ಎಫ್ ಎ ಪರೀಕ್ಷೆಗೆ ಕುಳಿತುಕೊಂಡನು.

ಗಣಿತಕ್ಕೆ ನೂರಕ್ಕೆ ನೂರು ಅಂಕಗಳನ್ನು ಪಡೆದುಕೊಂಡರೂ ಉಳಿದೆಲ್ಲ ವಿಷಯಗಳಲ್ಲಿ ಫೇಲ್ ಆಗುವ ರಾಮಾನುಜನ್ ಗೆ ವಿದ್ಯಾರ್ಥಿ ವೇತನ ದೊರೆಯಲಿಲ್ಲ. ಪರೀಕ್ಷೆಯಲ್ಲಿ ಆತ ಪಾಸಾಗಲೇ ಇಲ್ಲ. ತನ್ನ ಗುರುಗಳ ಸಲಹೆಯ ಮೇರೆಗೆ ಅವರ ಸ್ನೇಹಿತ ಮದರಾಸು ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದ ಸಿಂಗಾರವೇಲು ಮೊದಲಿಯಾರ್ ಅವರನ್ನು ಭೇಟಿಯಾಗಿ ಕಾಲೇಜಿಗೆ ಪ್ರವೇಶ ಪಡೆದನು. ಆದರೆ ಅಲ್ಲಿಯೂ ಕೂಡ ಅನಾರೋಗ್ಯದಿಂದಾಗಿ ಊರಿಗೆ ಮರಳಿದ ರಾಮಾನುಜಮ್ ಗೆ ಮದುವೆ ಮಾಡಿದರೆ ಬದುಕಿನಲ್ಲಿ ಜವಾಬ್ದಾರಿ ಬರುತ್ತದೆ ಎಂದು ಮದುವೆ ಮಾಡಿದರು. ಆತನ ಪತ್ನಿಯಾಗಿ ಬಂದ ಜಾನಕಿ ಅಮ್ಮಾಳ ಅತ್ಯಂತ ಚೆಲುವೆ ಮತ್ತು ಮುಗುದೆ ಕೂಡ.ಮನೆಯ ಖರ್ಚು ವೆಚ್ಚಗಳನ್ನು ತೂಗಿಸಲು ಗಿರಣಿಯೊಂದರಲ್ಲಿ ಲೆಕ್ಕಪತ್ರ ಬರೆಯಲು ಸೇರಿಕೊಂಡರು ರಾಮಾನುಜಮ್.

ತನ್ನ ಗುರುಗಳಾದ ರಾಮಕೃಷ್ಣ ಅಯ್ಯರ್ ಅವರ ಸಹಾಯದಿಂದ ಅಂದಿನ ಮದರಾಸು ಜಿಲ್ಲಾಧಿಕಾರಿಯಾದ ರಾವರನ್ನು ಭೇಟಿಯಾದ. ರಾಮಾನುಜಮನನ್ನು ಮೊದಮೊದಲು ಅಷ್ಟೇನು ಗಂಭೀರವಾಗಿ ಪರಿಗಣಿಸದ ರಾವ್ ರವರ ಕೈಗೆ ಆಕಸ್ಮಿಕವಾಗಿ ರಾಮನುಜಮ್ ನ ಗಣಿತ ಪುಸ್ತಕಗಳು ಗಮನ ಸೆಳೆದವು. ಆತನ ಅದ್ಭುತ ಪ್ರತಿಭೆಯನ್ನು ಕಂಡು ಕಲೆಕ್ಟರ್ ರಾವ್ 1912 ರಲ್ಲಿ ಮದ್ರಾಸ್ ಪೋರ್ಟ್ ಟ್ರಸ್ಟ್ ನಲ್ಲಿ ರೆಕಾರ್ಡ್ ಸೆಕ್ಷನ ನಲ್ಲಿ ಸಹಾಯಕನಾಗಿ ನೇಮಿಸಿದರು.

ಈ ಪೋರ್ಟ್ ಟ್ರಸ್ಟ್ ನ ಮುಖ್ಯಸ್ಥನಾಗಿದ್ದ ಬ್ರಿಟಿಷ್ ಅಧಿಕಾರಿ ಸರ್ ಫ್ರಾನ್ಸಿಸ್ ಈತನ ಅದ್ಭುತ ಗಣಿತದ ಪಾಂಡಿತ್ಯವನ್ನು ಕಂಡು ಆತನಿಗೆ ಒಂದು ಕೋಣೆಯನ್ನೇ ಒದಗಿಸಿ ಎಲ್ಲ ರೀತಿಯ ಸಂಶೋಧನೆಗೆ ಅನುಕೂಲ ಮಾಡಿಕೊಟ್ಟರಲ್ಲದೆ ರಾಮಾನುಜಮ್ ಹಿತೈಷಿಯಾಗಿದ್ದ ಶೇಷು ಅಯ್ಯರ್ ಅವರ ಸಹಾಯದಿಂದ ಆತನ ಸಂಶೋಧನಾ ವಿಷಯಗಳ ರಿಸರ್ಚ್ ಪೇಪರ್ ಗಳನ್ನು ಕೇಂಬ್ರಿಡ್ಜ್ ಯೂನಿವರ್ಸಿಟಿ ಗೆ ಕಳುಹಿಸಿ ಕೊಟ್ಟರು. (ಇಷ್ಟರಲ್ಲಾದರೆ ಆತನ ಒಂದು ಸಂಶೋಧನಾ ವಿಷಯದ ಪೇಪರ್ ಇಂಗ್ಲೆಂಡಿನ ಮ್ಯಾಥೆಮ್ಯಾಟಿಕ್ಸ್ ಜರ್ನಲ್ ನಲ್ಲಿ ಪ್ರಕಟವಾಗಿ ಅಪಾರ ಖ್ಯಾತಿಗಳಿಸಿತ್ತು) ಮೊದಮೊದಲು ರಾಮಾನುಜಮ್ ಅವರ ಪೇಪರ್ ಗಳನ್ನು ಗಂಭೀರವಾಗಿ ಪರಿಗಣಿಸದ, ಕೇಂಬ್ರಿಡ್ಜ್ ಯೂನಿವರ್ಸಿಟಿಯ ಪ್ರಖ್ಯಾತ ಗಣಿತಜ್ಞರಾದ ಹಾರ್ಡಿ ಮತ್ತು ಲಿಟಲ್ ವುಡ್ ರಾಮಾನುಜಮ್ ಅವರ ರಿಸರ್ಚ್ ಪೇಪರ್ ಗಳನ್ನು ನೋಡಿ ದಂಗಾದರು. ಕೂಡಲೇ ಅವರನ್ನು ಕೇಂಬ್ರಿಡ್ಜ್ ಯುನಿವರ್ಸಿಟಿಗೆ ಕರೆತರಲು ವ್ಯವಸ್ಥೆ ಮಾಡಿದರು. 50 ವಿವಿಧ ರೀತಿಯ ಪ್ರಮೇಯಗಳನ್ನು ಬಿಡಿಸಿದ್ದ ರಾಮಾನುಜಂ ಕಂಟಿನ್ಯೂಡ್ ಫ್ರಾಕ್ಷನ್ ಮತ್ತು ಎಲೆಕ್ಟ್ರಿಕಲ್ ಫ್ರಾಕ್ಷನ್ಗಳಲ್ಲಿ ಹೊಸ ದಿಕ್ಕನ್ನು ತೋರಿಸಿದ್ದರು.

ಎಫ್ ಎ ಪರೀಕ್ಷೆಯಲ್ಲಿ ಪಾಸಾಗದ ರಾಮಾನುಜಮ ರನ್ನು, ಕೇಂಬ್ರಿಡ್ಜ್

ವೀಣಾ ಹೇಮಂತಗೌಡ ಪಾಟೀಲ್,
ಮುಂಡರಗಿ, ಗದಗ

ಯೂನಿವರ್ಸಿಟಿಯ ಗಣಿತಜ್ಞರ ಸಲಹೆಯ ಮೇರೆಗೆ ಆತನ ಸಂಶೋಧನೆಗೆ ಅನುವು ಮಾಡಿಕೊಡಲು ಮದ್ರಾಸ್ ವಿಶ್ವವಿದ್ಯಾಲಯದ ಎಲ್ಲ ಗಣಿತ ಪ್ರೊಫೆಸರಗಳು ಒಪ್ಪಿಕೊಂಡರು.

ಈಗಾಗಲೇ ಗಣಿತದಲ್ಲಿ ಹೆಚ್ಚಿನ ಸಂಶೋಧನೆಗೆ ಕೇಂಬ್ರಿಡ್ಜ್ ಯೂನಿವರ್ಸಿಟಿಗೆ ತೆರಳಿದ್ದ ಭಾರತೀಯರಾದ ಪಿ ಸಿ ಮಹಾಲನೋಬಿಸ್ ಅವರೊಂದಿಗೆ ಚರ್ಚಿಸಿದ ಹಾರ್ಡಿ ಮತ್ತು ಲಿಟಲ್ ವುಡ್ ರಾಮಾನುಜಮರನ್ನು ಕೇಂಬ್ರಿಡ್ಜ್ ಯೂನಿವರ್ಸಿಟಿಗೆ ಕರೆಸಲು ಆತುರರಾಗಿದ್ದರು.

ಧರ್ಮ ಬಾಹಿರವಾಗಿ ಸಾಗರದಾಚೆ ಪಯಣಿಸಿ ವಿದ್ಯಾಭ್ಯಾಸಗೈದು ತಮ್ಮ ಗುರಿ ಮುಟ್ಟಲು ತನ್ನ ಕುಲದೇವಿ ನಾಮಕ್ಕಲ್ ನ ನಾಮಗಿರಿ ತಾಯಿಯ ಆಶೀರ್ವಾದ ಮತ್ತು ಹೂವಿನ ಪ್ರಸಾದದ ಸಮ್ಮತಿಯೊಂದಿಗೆ 1914ರಲ್ಲಿ ಕೇಂಬ್ರಿಡ್ಜ್ ನ ಟ್ರಿನಿಟಿ ಕಾಲೇಜ್ ಗೆ ದಾಖಲಾದರು.

ಲಂಡನ್ ನ ಕಾಲೇಜಿನಲ್ಲಿ ಪೈ ಮೂಲ್ಯವನ್ನು ಅರಿಯಲು ಮಾಡ್ಯೂಲರ್ ಇಕ್ವೇಶನ ಪ್ರಯತ್ನದಲ್ಲಿ ರಾಮಾನುಜಮ್ ಇದ್ದರೆ, ಅತ್ತ ಗಣಿತಜ್ಞ ಹಾರ್ಡಿ ಎಲ್ಲ ಗಣಿತಜ್ಞರ ಸಭೆಯಲ್ಲಿ ರಾಮಾನುಜನ್ ಬಿಡಿಸಿದ ಲೆಕ್ಕಗಳ ಪುಸ್ತಕವನ್ನು ಪ್ರಸ್ತುತಪಡಿಸಿದನು. ಆತನ ಅದ್ಭುತ ಗಣಿತ ಪಾಂಡಿತ್ಯವನ್ನು ಕಂಡ ಅಲ್ಲಿದ್ದ ಗಣಿತಜ್ಞರು ಆಶ್ಚರ್ಯ ವ್ಯಕ್ತಪಡಿಸಿದರು. ಆತನಿಗೆ ಎಲ್ಲ ರೀತಿಯ ಸಹಕಾರ ನೀಡೋಣ ಎಂದು ಒಕ್ಕೊರಳಿನಿಂದ ಘೋಷಿಸಿದರು.

ಶುದ್ಧ ಶಾಖಾಹಾರಿಯಾದ ರಾಮನುಜಮ್ ಗೆ ಲಂಡನ್ ನ ತಂಪು ವಾತಾವರಣ ಒಗ್ಗಲಿಲ್ಲ. ಕೇಂಬ್ರಿಡ್ಜ್ ನ ಹಾಸ್ಟೆಲ್ನಲ್ಲಿ ವಾಸವಾಗಿದ್ದ ರಾಮಾನುಜಮ್ ಬೆಳಗಿನ ಜಾವವೇ ಎದ್ದು ಸ್ನಾನ ಸಂಧ್ಯಾವಂದನೆಗಳನ್ನು ಪೂರೈಸಿ, ಪೂಜೆ ಮಾಡಿ ಜೋರಾಗಿ ಹಾಡುತ್ತಾ, ಮಂಗಳಾರತಿ ಮಾಡುತ್ತಿದ್ದನು. ಇದನ್ನು ಕಂಡು ಆತನ ಸ್ನೇಹಿತರು ನಗಾಡುತ್ತಿದ್ದರು. ಅತ್ಯಂತ ಸೂಕ್ಷ್ಮ ಮನಸ್ಸಿನ ರಾಮಾನುಜಮ್ ಗೆ ಮನೆಯ, ಪತ್ನಿಯ ನೆನಪು ಇನ್ನಿಲ್ಲದಂತೆ ಕಾಡುತ್ತಿತ್ತು. ಹೂಗಳಲ್ಲಿ ಪತ್ನಿಯನ್ನು ಕಲ್ಪಿಸಿ ಮಾತನಾಡುತ್ತಿದ್ದ ಆತನನ್ನು ವಾಸ್ತವ ಜಗತ್ತಿನಲ್ಲಿ ತೇಲುತ್ತಿದ್ದ ಜನರು ಹುಚ್ಚನೆಂದು ಕರೆದು ಅವಮಾನಿಸಿದರು.

ಇತ್ತ ಆತನ ತಾಯಿ ಮಗನ ಓದಿಗೆ ತೊಂದರೆಯಾಗುವುದು ಎಂದು ಆತ ಬರೆದ ಯಾವೊಂದು ಪತ್ರಗಳನ್ನು ಆತನ ಪತ್ನಿಗೆ ದೊರೆಯದಂತೆ ಮಾಡಿದಳು. ಆಕೆ ಬರೆದ ಪತ್ರಗಳನ್ನು ಕೂಡ ಪೋಸ್ಟ್ ಮಾಡದಂತೆ ಗಂಡನಿಗೆ ನಿರ್ಬಂಧ ಹೇರಿದರು. ಪತ್ನಿಯಿಂದ ಕಾಗದ ಕೂಡ ಸಿಗದೇ ಹೋದಾಗ ರಾಮನುಜಮ್ ಮತ್ತಷ್ಟು ವ್ಯಾಕುಲ ಚಿತ್ತ ನಾದನು. ತನ್ನೊಂದಿಗೆ ಇರಲು ಪತ್ನಿಯನ್ನು ಕಳುಹಿಸಿಕೊಡು ಎಂಬ ರಾಮಾನುಜಮ್ ಪತ್ರಕ್ಕೆ ನಿನ್ನ ಅಭ್ಯಾಸಕ್ಕೆ ತೊಂದರೆಯಾಗುತ್ತದೆ ಎಂದು ತಾಯಿ ಮರುತ್ತರ ಕಳುಹಿಸಲು ಆತ ಮತ್ತಷ್ಟು ನೊಂದುಕೊಂಡನು. ರೈಲು ಹಳಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಳ್ಳಲು ಹೋಗಿ ಪೊಲೀಸರ ಕೈಯಲ್ಲಿ ಸಿಕ್ಕು ಬಿದ್ದನು. ಬ್ರಿಟಿಷ್ ಕಾನೂನಿನಲ್ಲಿ ಆತ್ಮಹತ್ಯೆ ಅಪರಾಧ ಅದಕ್ಕೆ ಶಿಕ್ಷೆ ಇದೆ ಎಂಬುದನ್ನು ಅರಿಯದ ರಾಮಾನುಜಮ್ ನನ್ನು ಪ್ರಯಾಸ ಪಟ್ಟು ಹಾರ್ಡಿ, ಮಹಾಲನೋಬಿಸ್ ಮತ್ತು ಬ್ಯಾನರ್ಜಿ ಪೊಲೀಸ್ ಠಾಣೆಯಿಂದ ಮರಳಿ ಕರೆ ತಂದರು.

ರಾಮಾನುಜಮ್ ನ ಆರೋಗ್ಯ ಹದಗೆಡುತ್ತಿತ್ತು.... ವೈದ್ಯರು ಆತನ ಸಂಪೂರ್ಣ ತಪಾಸಣೆ ಮಾಡಿ ಆತನಲ್ಲಿ ಕ್ಷಯರೋಗ ಪತ್ತೆಯಾಗಿರುವುದನ್ನು ತಿಳಿಸಿದರು. ಪ್ರತ್ಯೇಕವಾಗಿ ಚಿಕಿತ್ಸೆ ನೀಡುವ ಸ್ಯಾನಿಟೋರಿಯಂ ನಲ್ಲಿ ಭರ್ತಿ ಮಾಡಿದರು. ಅಲ್ಲಿಯೂ ಕೂಡ ಸ್ವಲ್ಪವೂ ವಿಶ್ರಾಂತಿ ಪಡೆಯದೆ ಸದಾ ಅಂಕಗಳ ಜಗತ್ತಿನಲ್ಲಿ ರಾಮಾನುಜಮ್ ಮುಳುಗಿ ಹೋಗಿರುತ್ತಿದ್ದ.

ಅಂತಿಮವಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವಾಗಲೇ ರಾಮಾನುಜಂಗೆ 1918ರ ಫೆಬ್ರುವರಿ 28 ರಂದು ಎಫ ಆರ್ಎಸ್ ಪದವಿಯನ್ನು ನೀಡಲಾದ ಸಂದೇಶವನ್ನು ಹೊತ್ತು ಬಂದ ಹಾರ್ಡಿ ಮತ್ತಿತರರು ಅಭಿನಂದಿಸಿದರು. ಐಡೆಂಟಿಟಿಸ್ ಗಳನ್ನು ಪರಿಹರಿಸಿದ ವಿಶ್ವದ 464 ಗಣಿತಜ್ಞರಲ್ಲಿ ಒಬ್ಬನಾದನು ರಾಮಾನುಜಮ್.

ರಾಮಾನುಜಮ್ ಆರೋಗ್ಯದಲ್ಲಿ ಯಾವುದೇ ಸುಧಾರಣೆ ಕಾಣದಾದಾಗ ಆತನನ್ನು ಭಾರತಕ್ಕೆ ಮರಳಿ ಹೋಗುವಂತೆ ಹಾರ್ಡಿ ಸಲಹೆ ಮಾಡಿದ ಈಗಾಗಲೇ ಫೆಲೋ ಆಫ್ ರಾಯಲ್ ಸೊಸೈಟಿ ಎಂದು ನಾಮಾಂಕಿತನಾಗಿದ್ದ ರಾಮಾನುಜಮ್ ಗೆ ಮದ್ರಾಸ್ ವಿಶ್ವವಿದ್ಯಾಲಯದಲ್ಲಿ ಪ್ರೊಫೆಸರ್ ಎಂದು ನೌಕರಿ ನೀಡಲಾಗಿದ್ದು ಎಫ್. ಆರ್. ಎಸ್ ನವರು ರಾಮಾನುಜಂಗೆ ಪ್ರತಿ ವರ್ಷ 3750 ಗಳ ವಾರ್ಷಿಕ ವೇತನವನ್ನು ಕೂಡ ನೀಡುತ್ತಿದ್ದರು. ಈಗಾಗಲೇ ವಿವಿಧ ಗಣಿತಜ್ಞರೊಂದಿಗೆ ಕೂಡಿ ಬರೆದ ಅವರ 21ಕ್ಕೂ ಹೆಚ್ಚು ಪ್ರಬಂಧಗಳು ಇಂಗ್ಲೆಂಡ್ ನ ವಿವಿಧ ನಿಯತಕಾಲಿಕಗಳಲ್ಲಿ ಪ್ರಕಟವಾಗಿದ್ದವು.

1920ರಲ್ಲಿ ಮರಳಿ ಬಂದ ರಾಮಾನುಜಮ್ ರನ್ನು ಆತನ ತಾಯಿ ಮತ್ತು ತಮ್ಮ ಎದುರುಗೊಂಡರು. ಮರಳಿ ಮದ್ರಾಸಿಗೆ ಬಂದಾಗ ಹಿಂದೂ ನ್ಯೂಸ್ ಪತ್ರಿಕೆಯ ರಾಮಚಂದ್ರರಾವ್, ಆದಿ ನಾರಾಯಣ ಚಟ್ಟಿಯಾರ್, ಕಲೆಕ್ಟರ್ ರಾವ್, ಮದ್ರಾಸ್ ವಿಶ್ವವಿದ್ಯಾಲಯದ ಸಕಲ ಸಿಬ್ಬಂದಿ ವರ್ಗದವರು ರೈಲ್ವೆ ನಿಲ್ದಾಣದಲ್ಲಿ ಅವರನ್ನು ಎದುರುಗೊಂಡು ಅಭಿನಂದಿಸಿದರು.

ಮದರಾಸಿನಲ್ಲಿ ಅವರಿಗೆ ಉಳಿದುಕೊಳ್ಳಲು ಒಂದು ಪುಟ್ಟ ಬಂಗಲೆಯನ್ನು ಮತ್ತು ಆರೋಗ್ಯ ಸುಧಾರಣೆಗಾಗಿ ವೈದ್ಯರನ್ನು ಕೂಡ ಮದ್ರಾಸು ವಿಶ್ವವಿದ್ಯಾಲಯ ನಿಯುಕ್ತಿಗೊಳಿಸಿತ್ತು. ಇದೀಗ ಕೋಮಲತಮ್ಮಾಳ್ ಸೊಸೆಯನ್ನು ಕರೆಸಿದರು. ಬಹಳ ವರ್ಷಗಳ ನಂತರ ಪತಿ–ಪತ್ನಿಯರು ಮನ ಬಿಚ್ಚಿ ಮಾತನಾಡಿದರು. ಆದರೆ ರಾಮಾನುಜಮ್ ಅವರ ಕ್ಷಯ ರೋಗ ಉಲ್ಬಣವಾಗುತ್ತಲೇ ಹೋಯಿತು.

ಇದೇ ಸಮಯದಲ್ಲಿ ಅವರ 3750 ರೂಪಾಯಿಗಳ ವಾರ್ಷಿಕ ವೇತನ ದೊರೆತು ಅದರಲ್ಲಿ ಅರ್ಧ ಭಾಗವನ್ನು ವಿಶ್ವವಿದ್ಯಾಲಯಕ್ಕೆ ಹಿಂದಿರುಗಿಸಿದ ರಾಮಾನುಜಮ್ ಬಡ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡಲು ಆ ಹಣವನ್ನು ವಿನಿಯೋಗಿಸಿ ಎಂದು ವಿಶ್ವವಿದ್ಯಾಲಯವನ್ನು ಕೇಳಿಕೊಂಡರು.

ಅನಾರೋಗ್ಯ ಮತ್ತು ಚಿಕಿತ್ಸೆಯ ಮಧ್ಯದಲ್ಲಿಯೇ ಮಾಕ ಟೀಟ ಫಂಕ್ಷನ್ ಎಂಬ ಟ್ರಿಗ್ನಾಮೆಟ್ರಿಯ ಕಠಿಣ ಪ್ರಮೇಯವನ್ನು ಅವರು ಕಂಡುಹಿಡಿದದ್ದು. ತೀವ್ರ ಅನಾರೋಗ್ಯದಿಂದ ಬಳಲಿದ ರಾಮಾನುಜಮ್ ಅವರು 27 ಏಪ್ರಿಲ್ 1920 ರಲ್ಲಿ ತೀರಿಕೊಂಡರು. ಆಗ ಅವರಿಗೆ ಕೇವಲ 32 ವರ್ಷ ವಯಸ್ಸಾಗಿತ್ತು. ಜಗತ್ತಿನ ಅಪ್ರತಿಮ ಮೇಧಾವಿ ಗಣಿತಜ್ಞನಾದ ರಾಮಾನುಜಮ್ ಸಾಗರದ ಆಚೆ ಹೋಗಿ ಬಂದಿದ್ದು ಅದಕ್ಕೆ ಯಾವುದೇ ರೀತಿಯ ಪರಿಹಾರಾತ್ಮಕ ದೈವಕಾರ್ಯಗಳನ್ನು ಕೈಗೊಂಡಿಲ್ಲ ಎಂಬ ಕಾರಣವನ್ನು ಒಡ್ಡಿ ರಾಮಾನುಜಮ್ ರವರ ಸಂಸ್ಕಾರಕ್ಕೆ ಅವರ ಸ್ವಜಾತಿಯವರೇ ಬರದೇ ಹೋದದ್ದು ವಿಪರ್ಯಾಸವೇ ಸರಿ.

ಕಾಲಕ್ಕಿಂತ ಬಲು ಮುನ್ನ ಗಣಿತ ಲೋಕದಲ್ಲಿ ಚಲಿಸಿ ಹಲವಾರು ಫಾರ್ಮುಲಗಳನ್ನು ಕಂಡು ಹಿಡಿದಿದ್ದ ರಾಮಾನುಜಮ್ ಅವರ ಸಂಶೋಧನೆಗಳಲ್ಲಿನ ಸತ್ವ ಅಂದಿನ ಗಣಿತಜ್ಞರ ಬುದ್ಧಿಮತ್ತೆಗೆ ನಿಲುಕದ ನಕ್ಷತ್ರವಾಗಿತ್ತು. ರಾಮಾನುಜಮ್ ಅವರ ಸಂಶೋಧನೆಗಳನ್ನು ಇಂದು ಕ್ರಿಪ್ಟೋಲಜಿ, ಕ್ರಿಸ್ಟಲ್ಲಾಲಜಿ, ಆಸ್

WE ARE OPEN for Every Function
Hall is a Perfect suit for a meeting, Your Son & Daughters marriage, your child's birthday party, wedding reception or a business seminar. This a best party place located in hosapet, Vijayanagara Dist.
V N Royal Garden Function Hall

Behind Meeralam Talkies, Hosapete-583201 Vijayanagara Dist. Contact For Booking: 9980136034, 9880701217

ಸಂಶೋಧನೆಯಲ್ಲಿ ನೈಜತೆಗಿರಲಿ ಆದ್ಯತೆ

ಕೇಂದ್ರೀಯ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ. ಎಸ್. ಎ. ಬಾರಿ ಹೇಳಿಕೆ । ಯು.ಜಿ.ಸಿ ಪಿಎಚ್.ಡಿ ಮೂರನೇ ಹಂತದ ಕೋರ್ಸ್‌ವರ್ಕ್ ಉದ್ಘಾಟನೆ

■ ಹಂಪಿ ಟೈಮ್ಸ್ ಹೊಸಪೇಟೆ

ಕಥೆ, ಕಾದಂಬರಿಗಳಲ್ಲಿ ಕಲ್ಪನೆ ಮಹತ್ವದ ಪಾತ್ರ ನಿರ್ವಹಿಸಿದರೆ ಸಂಶೋಧನೆಗಳಲ್ಲಿ ಸಂಶೋಧನಾ ವೈಜ್ಞಾನಿಕತೆ ಹಾಗೂ ಪ್ರಬಂಧದ ನೈಜತೆಯು ಮುಖ್ಯವಾಗಿದೆ ಎಂದು ಕುವೆಂಪು ವಿಶ್ವವಿದ್ಯಾಲಯ ಮತ್ತು ಗುಜರಾತಿನ ಗಾಂಧಿನಗರದ ಕೇಂದ್ರೀಯ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ. ಎಸ್. ಎ. ಬಾರಿ ಅಭಿಮತ ವ್ಯಕ್ತಪಡಿಸಿದರು.

ಕನ್ನಡ ವಿಶ್ವವಿದ್ಯಾಲಯದ ಮಂಟಪ ಸಭಾಂಗಣದಲ್ಲಿ ಅಧ್ಯಯನಾಂಗವು ಸೋಮವಾರ ಆಯೋಜಿಸಿದ್ದ ಯು.ಜಿ.ಸಿ ಪಿಎಚ್.ಡಿ ಮೂರನೇ ಹಂತದ ಕೋರ್ಸ್‌ವರ್ಕ್ ಉದ್ಘಾಟಿಸಿ 'ಸಮಾಜ ವಿಜ್ಞಾನ ಸಂಶೋಧನೆಯ ವೈಧಾನಿಕತೆ' ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು. ಇಂದಿನ ದಿನದಲ್ಲಿ ಸಮಾಜ ವಿಜ್ಞಾನ ಸಂಶೋಧಕರು ನಾಲ್ಕೈದು ಪುಸ್ತಕಗಳನ್ನು ಓದಿ ತಮ್ಮ ಸಂಶೋಧನಾ ಪ್ರಬಂಧವನ್ನು ಮಂಡಿಸುತ್ತಿರುವುದು

ಕಳವಳಕಾರಿ ಸಂಗತಿಯಾಗಿದೆ. ಪ್ರಮುಖವಾಗಿ ನಾವು 21 ನೇ ಶತಮಾನದ ಡಿಜಿಟಲ್ ಮಾಹಿತಿ ತಂತ್ರಜ್ಞಾನದ ಯುಗದಲ್ಲಿ ಮಾಹಿತಿ ಸಂಗ್ರಹಣೆಗೆ ಯಾವುದೇ ಕೊರತೆ ಇಲ್ಲ ಹೀಗಾಗಿ ಸಂಶೋಧಕರು ಹೆಚ್ಚೆಚ್ಚು ದತ್ತಾಂಶಗಳ ಸಂಗ್ರಹಿಸುವುದರ ಮೂಲಕ ಸೂಕ್ತವಾಗಿ ಪ್ರಬಂಧವನ್ನು ಮಂಡಿಸಬೇಕು. ಡಿಜಿಟಲ್ ತಂತ್ರಜ್ಞಾನವು ಸಂಶೋಧನಾ ಪ್ರಬಂಧದ ನೈತಿಕತೆಯ ಪ್ರಮಾಣಿಕತೆಯನ್ನು ತಿಳಿಸುತ್ತದೆ ಎಂದರು.

ಮೈಸೂರು ವಿಶ್ವವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಮುಜಾಫರ್ ಅಸಾದಿ ಅವರು 'ಸಮಾಜ ವಿಜ್ಞಾನ ಸಂಶೋಧನೆಯಲ್ಲಿ ಇತ್ತೀಚಿನ ಒಲವುಗಳು' ಕುರಿತು ಮಾತನಾಡಿದರು. ಕನ್ನಡ ಸಾಹಿತ್ಯವು ಕೇವಲ ಸಾಹಿತ್ಯದ ಪ್ರಕಾರವಲ್ಲ, ಅದು ಸಮಾಜವಿಜ್ಞಾನಗಳ ಭಾಗವಾಗಿದೆ. ಸ್ವಾತಂತ್ರ್ಯವೆಂದರೆ ಕೇವಲ ರಾಜಕೀಯವಲ್ಲ, ಅದರಲ್ಲಿ ನಮ್ಮ ಆರ್ಥಿಕತೆಯ ಅವಲಂಬನೆಯಿದೆ. ತೃತೀಯ ಜಗತ್ತು ಅಭಿವೃದ್ಧಿಯಲ್ಲಿ ಅನಾಭಿವೃದ್ಧಿ ಕಂಡಿದ್ದು ನಾಲ್ಕನೇ ಜಗತ್ತಿನ ಬಗ್ಗೆ ಮಾತನಾಡುವ ಸಂದರ್ಭದಲ್ಲಿ ನಮ್ಮ ಜ್ಞಾನ ಸಂಪತ್ತು ಕಣ್ಮರೆಯಾಗುತ್ತದೆ. ಅಭಿವೃದ್ಧಿ ವಿಷಯಗಳು ಸಮಾಜವಿಜ್ಞಾನದ ಭಾಗವಾಗಿದ್ದು ಜಾಗತಿಕರಣವು ಸಮಾಜದ ಮೇಲೆ ಗಾಢ ಪರಿಣಾಮ ಬೀರಿದೆ, ಆದರೆ ಅದೇ ಎಲ್ಲದಕ್ಕೂ ಪರಿಹಾರವಲ್ಲ. ಅಸ್ಮಿತೆ ರಾಜಕಾರಣ ಎನ್ನುವುದು ಸಮಾಜವಿಜ್ಞಾನಗಳ ವಿಷಯದಲ್ಲಿ ತುಂಬಾ ಪ್ರಬಲವಾದ ಸಾಧನವಾಗಿದ್ದು ಅದು ಕೇವಲ ಒಂದು ವ್ಯಾಪ್ತಿಗೆ ಸೀಮಿತವಾಗದೆ ಹುಡುಕಾಟದ ರೂಪವಾಗ ಬೇಕಾಗಿದೆ ಎಂದರು.

ಕನ್ನಡ ವಿವಿ ಕುಲಪತಿ ಪ್ರೊ.ಡಿ.ವಿ.ಪರಮ ಶಿವಮೂರ್ತಿ ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡಿ, ಸಂಶೋಧನೆಯಲ್ಲಿ ಪ್ರಾಮಾಣಿಕವಾಗಿ ತೊಡಗಿಸಿ ಕೊಳ್ಳುವ ಮೂಲಕ ಆದರ್ಶ ಸಂಶೋಧಕ ರಾಗಬೇಕೆಂದು ತಿಳಿಸಿದರು.

ಕುಲಸಚಿ ಪ್ರೊ. ವಿಜಯ್ ಪೂಣಚ್ಚ ತಂಬಂಡ ಪ್ರಾಸ್ತಾವಿಕವಾಗಿ ಮಾತನಾಡಿದರು, ಅಧ್ಯಯ ನಾಂಗದ ನಿರ್ದೇಶಕ ಡಾ. ಅಮರೇಶ್ ಯತಗಲ್, ಅಧ್ಯಾಪಕಿ ಪದ್ಮಾವತಿ ಕೆ ನಿರ್ವಹಿಸಿದರು.

ರೈತರಿಗೆ ಸರ್ಕಾರ ನೀಡುವ ಸೌಲಭ್ಯಗಳನ್ನು ಸದ್ಬಳಕೆ ಮಾಡಿಕೊಳ್ಳಿ: ಶಾಸಕ ಡಾ.ಎನ್.ಟಿ.ಶ್ರೀನಿವಾಸ

■ ಹಂಪಿ ಟೈಮ್ಸ್ ಕೂಡ್ಲಿಗಿ

ರೈತರಿಗೆ ಸರ್ಕಾರ ನೀಡುವ ಸೌಲಭ್ಯಗಳನ್ನು ಸದ್ಬಳಕೆ ಮಾಡಿಕೊಂಡು ಆರ್ಥಿಕವಾಗಿ ಸದೃಡರಾಗಬೇಕು ಎಂದು ಶಾಸಕ ಡಾ. ಎನ್.ಟಿ.ಶ್ರೀನಿವಾಸ್ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಶನಿವಾರ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಗಂಗಾ ಕಲ್ಯಾಣ ಫಲಾನುಭವಿಗಳಿಗೆ ಪಂಪು,ಮೋಟಾರು ಹಾಗೂ ಪರಿಕರಗಳನ್ನು ನೀಡುವ ಕಾರ್ಯಕ್ರಮದಲ್ಲಿ ಮಾತನಾಡಿದರು. ನೀರಾವರಿ ಯೋಜನೆಗಳು ಇಲ್ಲದ ಈ

ಕ್ಷೇತ್ರದಲ್ಲಿ ಗಂಗಾ ಕಲ್ಯಾಣ ಯೋಜನೆಯನ್ನು ಅರ್ಹ ಫಲಾನುಭವಿಗಳನ್ನ ಅಯ್ಕೆ ಮಾಡಿ ನೀಡಿದ್ದು, ಮುಂದಿನ ವರ್ಷಗಳಲ್ಲಿಯೂ ಸರ್ಮಪಕವಾಗಿ ಬಳಕೆ ಮಾಡಿಕೊಳ್ಳುವ ರೈತರಿಗೆ ಈ ಯೋಜನೆಯನ್ನು ಮುಟ್ಟಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದು ತಿಳಿಸಿದರು. ಸರ್ಕಾರದ ಯಾವುದೇ ಯೋಜನೆಗಳನ್ನು ಸಹ ಫಲಾನುಭವಿಗಳು ಸದ್ಬಳಕೆ ಮಾಡಿಕೊಂಡರೆ ಅದರಿಂದ ಸಬಲರಾಗುವುದರಲ್ಲಿ ಸಂಶಯವಿಲ್ಲ. ಹಿಂದುಳಿದ ತಾಲೂಕಿನ ಬವಣೆ ಅರಿತು ಈಗಾಗಲೇ ಕುಡಿಯುವ ನೀರು, ಹಾಗೂ ಮೂಲ ಸೌಕರ್ಯಗಳಿಗೆ ಒತ್ತು ನೀಡಿ ಸರ್ಕಾರದ ಮಟ್ಟದಲ್ಲಿ ಗಮನ ಸೆಳೆದ ಅನುದಾನ ಬಿಡುಗಡೆ ಮಾಡಿಸಿರುವೆ. ಮುಂಬರುವ ದಿನಗಳಲ್ಲಿ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾದ ಕಾರ್ಯಗಳನ್ನು ಮಾಡಿ, ಜನ ನೀಡಿದ ನಂಬಿಕೆಯನ್ನು ಉಳಿಸಿಕೊಂಡು ಹೋಗುವುದಾಗಿ ತಿಳಿಸಿದರು. ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕ ಮೆಹಬೂಬ್ ಬಾಷ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಗುರುಸಿದ್ದನ ಗೌಡ, ಕಾಂಗ್ರೆಸ್ ಮುಖಂಡ ಎನ್.ಟಿ.ತಮ್ಮಣ್ಣ, ಪಪಂ ಸದಸ್ಯ ಕಾವಲಿ ಶಿವಪ್ಪನಾಯಕ, ಹಿರೇಕುಂಬಳಗುಂಟೆ ಉಮೇಶ್, ಅಜ್ಜನಗೌಡ, ಮರುಳಸಿದ್ದಪ್ಪ, ಢಾಣಿ ರಾಘವೇಂದ್ರ, ಜಿಲಾನ್, ಸಿಎಸ್ ಪುರ ಬಸವರಾಜ ಗೌಡ ಸೇರಿದಂತೆ ಅನೇಕರು ಇದ್ದರು.

ತೆರಿಗೆ ಹಂಚಿಕೆಯಲ್ಲಿ ಮಲತಾಯಿ ಧೋರಣೆ

■ ಹಂಪಿ ಟೈಮ್ಸ್ ಹರಪನಹಳ್ಳಿ

ರಾಜ್ಯದ ಪಾಲಿನ ತೆರಿಗೆ ಹಣವನ್ನು ಪೂರ್ಣ ಪ್ರಮಾಣ ನೀಡದೆ ಮಲತಾಯಿ ಧೋರಣೆಯ ನೀತಿಯನ್ನು ಕೇಂದ್ರ ಸರ್ಕಾರ ಮಾಡುತ್ತಿದ್ದು . ರಾಜ್ಯದ ಅಸ್ಮಿತೆಯ ಪ್ರಶ್ನೆಗಳು ಬಂದಾಗ ರಾಜ್ಯದ ಪರ ದ್ವನಿಗೂಡಿಸಿ ನಮ್ಮ ರಾಜ್ಯ ಸಂಸದರು. ದೇಶದ ಅಭಿವೃದ್ಧಿಯ ಕಡೆಗೆ ಗಮನ ಹರಿಸದೇ ಕೇವಲ ಮಟ ಮಾನ್ಯಗಳ ಹೆಸರಿನಲ್ಲಿ ರಾಜಕೀಯ ಮಾಡುತ್ತಿರುವುದು ಖಂಡನೀಯ. ಎಂದು ಭಾರತ ಕಮ್ಯುನಿಸ್ಟ್ ಪಕ್ಷದ ತಾಲೂಕು ಕಾರ್ಯದರ್ಶಿ ಗುಡಿಹಳ್ಳಿ ಹಾಲೇಶ್ ಪ್ರ ತಿಭಟನೆಯಲ್ಲಿ ತಿಳಿಸಿದರು.

ಪಟ್ಟಣದ ಇಜಾರಿ ಶಿರಸಪ್ಪ ವೃತ್ತದಲ್ಲಿ ಸೋಮವಾರ ಭಾ ರತ ಕಮ್ಯುನಿಸ್ಟ್ ಪಕ್ಷದ ವತಿಯಿಂದ. ಕೇಂದ್ರ ಸರ್ಕಾರವು ಕಳೆದ ಬಜೆಟ್ ನಲ್ಲಿ ತೆರಿಗೆ ಹಣ ನೀಡು ವಲ್ಲಿ ರಾಜ್ಯಕ್ಕೆ ತಾರತಮ್ಯ ವೆಸಗಿದೆ ಎಂದು ಪ್ರತಿಭಟನೆ ನಡೆಸಲಾಯಿತು. ದೇಶದಲ್ಲಿಯೇ ಅತೀ ಹೆಚ್ಚು ತೆರಿಗೆ ಪಾವತಿಯನ್ನು ಮಾ ಡುವಲ್ಲಿ ನಮ್ಮ ರಾಜ್ಯವು ಎರಡನೇ ಸ್ಥಾನದಲ್ಲಿದ್ದು. ನಮ್ಮಿಂದ ಪಡೆದ ತೆರಿಗೆ ಹಣವನ್ನು ನಮ್ಮ ರಾಜ್ಯಕ್ಕೆ ಪೂರ್ಣ ಪ್ರಮಾಣದಲ್ಲಿ ನೀಡದೇ ಮೂಗಿಗೆ ತುಪ್ಪ ಸವರಿದೆ.

ಅಗಾಧ ಒಕ್ಕೂಟ ವ್ಯವಸ್ಥೆಯಿಂದ ಒಳ ಗೊಂಡಿರುವ ನಮ್ಮ ದೇಶವು. ಸಂವಿಧಾನದ ಆಶಯದಂತೆ ಎಲ್ಲಾ ರಾಜ್ಯ ಗಳಿಗೂ ಅಲ್ಲಿ ಜನ ಸಂಖ್ಯೆ ಗಳಿಗೆ ಅನುಗು ಣವಾಗಿ ಸೂಕ್ತ ರೀತಿಯಲ್ಲಿ ತೆರಿಗೆ ಹಂಚಿಕೆಯಾಗದೇ ಬಿಜೆಪಿ ಆಡಳಿತವಿರುವ ರಾಜ್ಯ ಗಳಿಗೆ ಹೆಚ್ಚಿನ ಆದ್ಯತೆ ನೀಡಿದ್ದು.ಉಳಿದ ರಾಜ್ಯ ಗಳಿಗೆ ಅನ್ಯಾಯ ವೆಸಗಿದೆ ಎಂದರು.

ಹೆಚ್ ಸಂತೋಷ್ .ರಮೇಶ್ ನಾಯ್ಕ. ಬಳಿಗನೂರು ಕೊಟ್ರೇಶ್. ಚಂದ್ರನಾಯ್ಕ. ರಾಗಿಮಸಲವಾಡ ಹನುಮಂತಪ್ಪ. ಗುಡಿಹಳ್ಳಿ ಶಿವರಾಮ್. ದೊಡ್ಡ ಬಸವರಾಜ. ಡಿ ಹೆಚ್ ಅರುಣ. ಇನ್ನಿತರರು ಭಾಗವಹಿಸಿದ್ದರು.

ಅಂಗಾಂಗ ದಾನ ನೋಂದಣಿ ಶಿಬಿರ

■ ಹಂಪಿ ಟೈಮ್ಸ್ ಬಳ್ಳಾರಿ

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ವಿಮ್ಸ್ ಇವರ ಸಹಕಾರದೊಂದಿಗೆ ನಗರದ ಜೈನ್ ಮಾರ್ಕೆಟ್ ಬಳಿ ಗುರುಪುಷ್ಕರ ಜೈನ ಸೇವಾ ಸಮಿತಿ ವತಿಯಿಂದ ಭಾನುವಾರ ಸ್ವಯಂಪ್ರೇರಿತ ಅಂಗಾಂಗ ದಾನ ನೋಂದಣಿ ಶಿಬಿರ ಹಮ್ಮಿಕೊಳ್ಳಲಾಯಿತು.

ಶ್ರೀ ಗುರುಪುಷ್ಕರ ಜೈನ ಸೇವಾ ಸಮಿತಿಯ ಉಪಾಧ್ಯಕ್ಷರಾದ ಸುರಜಮಲ್ ಅವರು ಅಂಗಾಂಗ ದಾನ ನೋಂದಣಿ ಶಿಬಿರಕ್ಕೆ ಚಾಲನೆ ನೀಡಿದರು.

ಜೈನ ಮಾರ್ಕೆಟ್ ಹಾಗೂ ಇತರೆ ಮಾರುಕಟ್ಟೆಯ ಅಂಗಡಿಗಳಿಗೆ ತೆರಳಿ ನೋಂದಣಿ ಮಾಡಿಸಲಾಯಿತು.

ಇಂದು ರಾಷ್ಟ್ರ ಮಟ್ಟದಲ್ಲಿ ಬಳ್ಳಾರಿ ಜಿಲ್ಲೆಯು ಮೊದಲ ಸ್ಥಾನದಲ್ಲಿದ್ದು, ಇಲ್ಲಿಯವರೆಗೆ ಒಟ್ಟು

4240 ನೋಂದಣಿ ಮಾಡಿಸಲಾಗಿದೆ. ಇವರಲ್ಲಿ 2238 ಪುರುಷರು, 2002 ಮಹಿಳೆಯರು ನೋಂದಣಿ ಮಾಡಿಸಿಕೊಂಡಿದ್ದಾರೆ.

ಶಿಬಿರದಲ್ಲಿ ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿ ಡಾ. ವೀರೇಂದ್ರಕುಮಾರ, ವೈದ್ಯಾಧಿಕಾರಿ ಡಾ.ಕರುಣಾ, ನೇತ್ರ ತಜ್ಞೆ ಡಾ.ಶರಣ್ಯ, ಡಾ.ಕಾರ್ತಿಕ್, ಡಾ.ಕಾವ್ಯ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್. ದಾಸಪ್ಪನವರ, ಸೇವಾ ಸಮಿತಿಯ ಕೇವಲ್ ಚಂದ್ರ, ಅಶೋಕ ಭಂಡಾರಿ, ಪ್ರಕಾಶ ಮೆಹ್ತಾ, ಪೂಲಚಂದ, ಸುರೇಶ ಕುಮಾರ, ದಿನೇಶ, ಸುರೇಶ ವಿನಕಿಯಾ, ಧನರಾಜ್ ಸೇರಿದಂತೆ ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಂದ ವೈದ್ಯಾಧಿಕಾರಿಗಳು ಹಾಗೂ ಆಶಾ ಕಾರ್ಯ ಕರ್ತೆಯರು ಭಾಗವಹಿಸಿದ್ದರು.

ಫೆ.25ಕ್ಕೆ ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗೆ ಪರೀಕ್ಷೆ ವಸ್ತ್ರ ಸಂಹಿತೆ ಕಡ್ಡಾಯ

■ ಹಂಪಿ ಟೈಮ್ಸ್ ಬಳ್ಳಾರಿ

2022–23ನೇ ಸಾಲಿನ ಕಲ್ಯಾಣ ಕರ್ನಾಟಕದ ಪೊಲೀಸ್ ಕಾನ್ಸ್‌ಟೇಬಲ್ (ಸಿವಿಲ್) (ಪುರುಷ ಮತ್ತು ಮಹಿಳಾ), (ತೃತೀಯ ಲಿಂಗ ಪುರುಷ ಮತ್ತು ಮಹಿಳಾ)–1137 ಹುದ್ದೆಗಳ ನೇಮಕಾತಿಗೆ ಲಿಖಿತ ಪರೀಕ್ಷೆಯು ಫೆ.25 ರಂದು ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 12.30 ಗಂಟೆಯವರೆಗೆ ನಗರದ 12 ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿದ್ದು, ಲಿಖಿತ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳು ಕಡ್ಡಾಯವಾಗಿ ವಸ್ತ್ರ ಸಂಹಿತೆಯನ್ನು ಪಾಲಿಸಬೇಕು ಎಂದು ಜಿಲ್ಲಾ ಪೊಲೀಸ್ ಅಧೀಕ್ಷಕರಾದ ರಂಜೀತ್ ಕುಮಾರ್ ಬಂಡಾರು ಅವರು ತಿಳಿಸಿದ್ದಾರೆ.

ಪುರುಷ ಮತ್ತು ತೃತೀಯಲಿಂಗ ಪುರುಷ ಅಭ್ಯರ್ಥಿಗಳ ವಸ್ತ್ರ ಸಂಹಿತ

ಪುರುಷ ಮತ್ತು ತೃತೀಯಲಿಂಗ ಪುರುಷ ಅಭ್ಯರ್ಥಿಗಳು ಅರ್ಧ ತೋಳಿನ ಶರ್ಟ್‌ಗಳನ್ನು ಕಡ್ಡಾಯವಾಗಿ ಧರಿಸಬೇಕು ಹಾಗೂ ಸಾಧ್ಯವಾದಷ್ಟು ಕಾಲರ್ ರಹಿತ ಶರ್ಟ್‌ಗಳನ್ನು ಧರಿಸುವುದು, ಜಿಪ್ ಪ್ಯಾಕೆಟ್‌ಗಳು, ದೊಡ್ಡ ಬಟನ್‌ಗಳು ಇರುವ ಶರ್ಟ್‌ಗಳನ್ನು ಧರಿಸುವಂತಿಲ್ಲ.

ಜೀನ್ಸ್ ಪ್ಯಾಂಟ್ ಮತ್ತು ಹೆಚ್ಚಿನ ಜೇಬುಗಳಿರುವ ಪ್ಯಾಂಟ್‌ಗಳನ್ನು ಧರಿಸುವಂತಿಲ್ಲ. ಪರೀಕ್ಷಾ ಕೇಂದ್ರದೊಳಗೆ ಹೂಗಳನ್ನು ನಿಷೇಧಿಸಲಾಗಿದೆ. ಅಭ್ಯರ್ಥಿಗಳು ತೆಳುವಾದ ಅಡಿಭಾಗವಿರುವ ಪಾದರಕ್ಷೆಗಳನ್ನು (ಚಪ್ಪಲಿ) ಧರಿಸುವುದು. ಕುತ್ತಿಗೆ ಸುತ್ತಾ ಯಾವುದೇ ಲೋಹದ ಆಭರಣಗಳು ಅಥವಾ ಉಂಗುರ ಮತ್ತು ಕಡಗಳನ್ನು ಧರಿಸುವುದು ನಿಷೇಧಿಸಲಾಗಿದೆ.

ಮಹಿಳಾ ಮತ್ತು ತೃತೀಯಲಿಂಗ ಮಹಿಳಾ ಅಭ್ಯರ್ಥಿಗಳ ವಸ್ತ್ರ ಸಂಹಿತೆ

ಮಹಿಳಾ ಮತ್ತು ತೃತೀಯಲಿಂಗ ಮಹಿಳಾ ಅಭ್ಯರ್ಥಿಗಳು ವಿಸ್ತಾರವಾದ ಕಸೂತಿ, ಹೂಗಳು, ಬ್ರೂಚ್‌ಗಳು ಅಥವಾ ಬಟನ್‌ಗಳು ಹೊಂದಿರುವ ಬಟ್ಟೆಗಳನ್ನು ಧರಿಸುವುದು ನಿಷೇಧಿಸಲಾಗಿದೆ.

ಪರೀಕ್ಷೆಯ ದಿನದಂದು ಪೂರ್ಣ ತೋಳಿನ ಬಟ್ಟೆಗಳನ್ನು ಮತ್ತು ಜೀನ್ಸ್ ಪ್ಯಾಂಟ್ ಧರಿಸಬಾರದು, ಅದರ ಬದಲಾಗಿ ಅರ್ಧ ತೋಳಿನ ಬಟ್ಟೆಗಳನ್ನು ಅವರಿಗೆ ಮುಜುಗರವಾಗದಂತೆ ಅಭ್ಯರ್ಥಿಗಳು ಧರಿಸುವಂತೆ ನಿರ್ದೇಶಿಸಲಾಗಿದೆ. ಎತ್ತರವಾದ ಹಿಮ್ಮಡಿಯ ಶೂಗಳನ್ನು, ಚಪ್ಪಲಿಗಳನ್ನು ಮತ್ತು ದಪ್ಪವಾದ ಅಡಿ ಭಾಗ ಹೊಂದಿರುವ ಶೂಗಳನ್ನಾಗಲಿ, ಚಪ್ಪಲಿಗಳನ್ನಾಗಲಿ ಧರಿಸಬಾರದು. ತೆಳುವಾದ ಅಡಿಭಾಗ ಹೊಂದಿರುವ ಚಪ್ಪಲಿಗಳು ಧರಿಸುವುದು ಕಡ್ಡಾಯವಾಗಿದೆ.

ಮಹಿಳಾ ಮತ್ತು ತೃತೀಯಲಿಂಗ ಮಹಿಳಾ ಅಭ್ಯರ್ಥಿಗಳು ಯಾವುದೇ ರೀತಿಯ ಲೋಹದ ಆಭರಣಗಳನ್ನು ಧರಿಸುವುದು ನಿಷೇಧಿಸಲಾಗಿದೆ (ಮಂಗಳಸೂತ್ರ ಮತ್ತು ಕಾಲುಂಗುರ ಹೊರತುಪಡಿಸಿ). ಲಿಖಿತ ಪರೀಕ್ಷೆಗೆ ಅರ್ಹರಿರುವ ಅಭ್ಯರ್ಥಿಗಳಿಗೆ ಕರೆಪತ್ರದ ಬಗ್ಗೆ ಮುಂಬರುವ ದಿನಗಳಲ್ಲಿ ಎಸ್. ಎಂ.ಎಸ್ ಮೂಲಕ ಮಾಹಿತಿಯನ್ನು ನೀಡಲಾಗುವುದು ಹಾಗೂ ಕರೆಪತ್ರದ ಲಿಂಕ್ ಅನ್ನು ಸಹ ಕಳುಹಿಸಲಾಗುವುದು. ಅಭ್ಯರ್ಥಿಗಳು ಕರೆಪತ್ರವನ್ನು ಡೌನ್‌ಲೋಡ್ ಮಾಡಿಕೊಂಡು ನಿಗದಿಪಡಿಸಿದ ದಿನಾಂಕದಂದು ಲಿಖಿತ ಪರೀಕ್ಷೆಗೆ ವಸ್ತ್ರ ಸಂಹಿತೆಯೊಂದಿಗೆ ಹಾಜರಾಗಬೇಕು ಎಂದು ತಿಳಿಸಿದ್ದಾರೆ.

ಮೈಕ್ರೋ ನ್ಯೂಸ್

ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರ ಪ್ರವಾಸ

ಹಂಪಿ ಟೈಮ್ಸ್ ಹೊಸಪೇಟೆ

ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರ ಪ್ರವಾಸ ಸದಸ್ಯರಾದ ಶಶಿಧರ್ ಕೋಸಂಬೆ ಅವರು ಫೆಬ್ರವರಿ 14 ಮತ್ತು ಫೆ.15 ರಂದು ವಿಜಯನಗರ ಜಿಲ್ಲೆಯಲ್ಲಿ ಪ್ರವಾಸ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ. ಶಶಿಧರ್ ಕೋಸಂಬೆ ಅವರು ಫೆ.13ರಂದು ಬೆಂಗಳೂರಿನಿಂದ ಹೊರಟು ಬೆಳಿಗ್ಗೆ 5 ಗಂಟೆಗೆ ವಿಜಯನಗರ ಜಿಲ್ಲೆಗೆ ಆಗಮಿಸುವರು. ಫೆ.14ರಂದು ಬೆಳಿಗ್ಗೆ 10:30ಕ್ಕೆ ಬಾಲ್ಯ ವಿವಾಹ ನಿಷೇದ ಕಾಯ್ದೆ–2006, ಮಕ್ಕಳ ಮೇಲಿನ ಲೈಂಗಿಕ ಅಫರಾದ ತಡೆ ಕಾಯ್ದೆ–2012ರ ಕುರಿತಾದ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಆಯೋಜಿಸಿರುವ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಬಳಿಕ ಅಂದು ಹೊಸಪೇಟೆಯಲ್ಲಿ ವಾಸ್ತವ್ಯ ಮಾಡುವರು.

ಫೆ.15ರಮದು ಬೆಳಿಗ್ಗೆ 10.30ಕ್ಕೆ ಮಕ್ಕಳಿಗೆ ಸಂಬಂದಿಸಿದ ಕಾಯ್ದೆಗಳಾದ ಆರ್.ಟಿ.ಇ ಕಾಯ್ದೆ–2009, ಬಾಲ ನ್ಯಾಯ(ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ–2015, ಮಕ್ಕಳ ರಕ್ಷಣಾ ನೀತಿ–2016ರ ಕುರಿತು ಕಾರ್ಯಗಾರದಲ್ಲಿ ಪಾಲ್ಗೊಳ್ಳುವರು. ಬಳಿಕ ಅಂದು ಸಂಜೆ ಸಂಜೆ 6 ಗಂಟೆಗೆ ಬಳ್ಳಾರಿಗೆ ಪ್ರಯಾಣ ಬೆಳಸುವರು ಎಂದು ವಿಜಯನಗರ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದರು.

ಹನಿ ನಿರಾವರಿ ಪದ್ಧತಿ: ಒಂದು ದಿನದ ತರಬೇತಿ ಫೆ.14ಕ್ಕೆ

ಹಂಪಿ ಟೈಮ್ಸ್ ಹೊಸಪೇಟೆ

ತೋಟಗಾರಿಕೆ ಇಲಾಖೆಯಿಂದ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ರೈತರಿಗೆ ಹನಿ ನಿರಾವರಿ ಪದ್ಧತಿ ಬಗ್ಗೆ ಒಂದು ದಿನದ ತರಬೇತಿಯನ್ನು ಫೆಬ್ರವರಿ 14ರಂದು ನಗರದ ರೋಟರಿ ಕ್ಲಬ್‌ನಲ್ಲಿ ಹಮ್ಮಿಕೊಳ್ಳಗಿದೆ.

ಆಸಕ್ತ ರೈತರು ಈ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿ, ಇದರ ಸದುಪಯೋಗ ಪಡಿದುಕೊಳ್ಳಬೇಕು ಎಂದು ಹಿರಿಯ ಸಹಾಯಕ ತೋಟಗಾರಿಗೆ ನಿರ್ದೇಶಕರು ಪ್ರಕಟಣೆಯಲ್ಲಿ ತೀಳಿಸಿದ್